CC-O. In Public Domain. Digitized by eGangotri

ಕನ್ನಡ ಸಂಸ್ಕೃತಿ : ನಮ್ಮ ಹೆಮ್ಮೆ

ಡಾ. ಎಂ. ಚಿದಾನಂದಮೂರ್ತಿ



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡ ಸಂಸ್ಕೃತಿ : ನಮ್ಮ ಹೆಮ್ಮೆ

ಡಾ. ಎಂ. ಚಿದಾನಂದಮೂರ್ತಿ

ಸಾಹಿತಿಗಳ ಕಲಾವಿದರ ಬಳಗ
ಬೆಂಗಳೂರು

Sri Vidyabharathi Book Centre, Sringeri

CC-O. In Public Domain. Digitized by eGangotri

KANNADA SAMSKRUTHI : NAMMA HEMME - a booklet in Kannada by Dr. M. Chidananda Murthy on the glory of Kannada Culture, Published by Sahithigala Kalavidara Balaga, 'Minchu', 6/A, 4th cross, Eleventh Main, Vijayanagara Second Stage, Bangalore - 560 040

pages: 32 Copyright: Publishers Price: Rs. 3-00

ಮೊದಲನೆಯ ಮುದ್ರಣ : ಜೂನ್ 1987, 3,000 ಪ್ರತಿಗಳು
ಎರಡನೆಯ ಮುದ್ರಣ : ಫೆಬ್ರವರಿ 1989, 2,000 ಪ್ರತಿಗಳು
ಮೂರನೆಯ ಮುದ್ರಣ : ಜುಲೈ 1989, 7,000 ಪ್ರತಿಗಳು

ಮುಖಚಿತ್ರ: ಬೇಲೂರಿನ ಹೊಯ್ಸಳ ಶಿಲ್ಪ
ಸೌಜನ್ಯ: ಶ್ರೀ ಕೆ. ಎನ್. ಗೌರಿಶಂಕರ್

ಪುಟ: 32 ಬೆಲೆ: ಮೂರು ರೂಪಾಯಿ ಕೃತಿಸ್ವಾಮ್ಯ: ಪ್ರಕಾಶಕರದು

ಪ್ರಕಾಶಕರು: ಸಾಹಿತಿಗಳ ಕಲಾವಿದರ ಬಳಗ, 'ಮಿಂಚು', 6/ಎ, 4ನೇ ಅಡ್ಡರಸ್ತೆ, ಹನ್ನೊಂದನೇ ಮುಖ್ಯರಸ್ತೆ, ವಿಜಯನಗರ ಎರಡನೇ ಹಂತ, ಬೆಂಗಳೂರು - 560 040.

ಮುದ್ರಕರು: ಓರಿಯನ್ ಪ್ರಿಂಟರ್ಸ್, ಸುದಾಮನಗರ ಬೆಂಗಳೂರು - 560 027.

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡ ಸಂಸ್ಕೃತಿ: ನಮ್ಮ ಹೆಮ್ಮೆ

ಸ್ವಾಭಿಮಾನ

ಕನ್ನಡ ಸಂಸ್ಕೃತಿಯ ತಿರುಳನ್ನು ಒಂದೆರಡು ಮಾತುಗಳಲ್ಲಿ ವಿವರಿಸಿ ಎಂದು ಯಾರಾದರೂ ಕೇಳಿದರೆ ಅವರಿಗೆ ನಾನು ಕೊಡುವ ಉತ್ತರ: ''ಸ್ವಾಭಿಮಾನ ಮತ್ತು ಸಮನ್ವಯ''. ಸ್ವಾಭಿಮಾನವೆಂದರೆ ತನ್ನ ಬಗ್ಗೆ ಮತ್ತು ತನ್ನತನದ ಬಗ್ಗೆ ಇರುವ ಪೂರ್ಣ ಅರಿವು ಮತ್ತು ವಿಶ್ವಾಸ. ಸ್ವಾಭಿಮಾನವೆಂದರೆ ಅಹಂಕಾರವಲ್ಲ. ಅಹಂಕಾರವು ಬಹುತೇಕ ಸ್ವಾರ್ಥಪರವೂ ಇತರ ಯಾರನ್ನೇ ಗುರುತಿಸದೆ ತನ್ನನ್ನು ಮಾತ್ರ ಎತ್ತಿ ಹಿಡಿದುಕೊಳ್ಳುವ ಸ್ವಪ್ರೇಮವೂ ಆಗಿದ್ದು ಟೊಳ್ಳುತನವನ್ನು ಬೆಳೆಸಿಕೊಂಡಿರುವ ಸ್ವಪ್ರತಿಷ್ಠೆಯ ಪ್ರತೀಕ. ಸ್ವಾಭಿಮಾನಿಯು ಬೆಳೆದ ಮತ್ತು ಬೆಳೆಯುವ ವ್ಯಕ್ತಿಯಾದುದರಿಂದ ಅವನು ಇತರ ವ್ಯಕ್ತಿ ಅಥವಾ ವ್ಯಕ್ತಿಗಳ ದೊಡ್ಡತನವನ್ನು ಗುರುತಿಸಲು ಸಿದ್ಧನಿರುತ್ತಾನೆ. ಸ್ವಾಭಿಮಾನವೆನ್ನುವುದು ಎರಡು ಮುಖಗಳ ನಾಣ್ಯವಿದ್ದಂತೆ - ನಾನು ಇನ್ನೊಬ್ಬನಿಗಿಂತ ಕಡಮೆ ಅಲ್ಲವೆಂಬ ನಂಬಿಕೆ ಇರುವಂತೆಯೇ ಇತರರೂ ತನಗಿಂತ ಕಡಮೆ ಇರಲಾರರು ಎಂಬ ನಂಬಿಕೆಯೂ ಅವನಿಗಿರುತ್ತದೆ. ಅವನು ಎಂದೂ ಇನ್ನೊಬ್ಬರ ನೆಳಲಾಗಿರಲು ಬಯಸದೆ ತನ್ನ ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಯತ್ನಿಸುತ್ತಾನೆ. ಯಾವುದೇ ಕ್ಷೇತ್ರದಲ್ಲಾಗಲಿ ಅಂತಹ ಸ್ವಾಭಿಮಾನಿಗಳಿಂದ ಮಾತ್ರವೇ ಮೌಲಿಕ ಕಾರ್ಯಗಳು ನಡೆಯುತ್ತವೆ.

ಸಮನ್ವಯ

ಸಮನ್ವಯ ಎನ್ನುವುದು ವ್ಯಕ್ತಿ ಬೆಳೆಯಲು ಎಲ್ಲ ಕಡೆಗಳಿಂದ ಎಲ್ಲ ಬಗೆಯ ಅಂಶಗಳನ್ನು ಸ್ವಾಗತಿಸುವ ಗುಣವನ್ನು ಹೇಳುತ್ತದೆ. ಅದು ಎಲ್ಲ ಕಡೆಗಳಿಂದ ಹಳ್ಳ, ನದಿ, ಕೊರಕಲುಗಳ ಮೂಲಕ ಹರಿದು ಬರುವ ನೀರನ್ನೆಲ್ಲ ತನ್ನಲ್ಲಿ ಒಳಗೊಳ್ಳುವ ಜಲಾಶಯವಿದ್ದಂತೆ. ಜಲಾಶಯವು ಹಳ್ಳ, ನದಿ, ಕೊರಕಲುಗಳ ನಕಲಲ್ಲ. ಅದಕ್ಕೊಂದು ವ್ಯಕ್ತಿತ್ವವಿದೆ, ವಿಶಿಷ್ಟ ಉದ್ದೇಶವಿದೆ. ವ್ಯಕ್ತಿಯ ವ್ಯಕ್ತಿತ್ವ ಬೆಳೆಯಬೇಕಾದರೆ ಅವನು ತನ್ನನ್ನು ಹತ್ತೂ ಕಡೆಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತೆರೆದುಕೊಳ್ಳಬೇಕು. ಹಲವು ಹತ್ತು ಬಗೆಯ ಪ್ರಭಾವಗಳಿಗೆ ತನ್ನನ್ನು ತಾನು ಒಡ್ಡಿಕೊಳ್ಳಬೇಕು. ಆದರೆ ಯಾವುದೋ ಒಂದನ್ನು ನೋಡಿಕೊಂಡು ಅದನ್ನೇ ಒಪ್ಪಿಕೊಂಡು ಅದನ್ನೇ ಬೆಳೆಸಿಕೊಂಡು ಅದಿಲ್ಲದೆ ಉಳಿದ ಎಲ್ಲವೂ ಸುಳ್ಳು ಎನ್ನುವ ಗುಣವು ಸಮನ್ವಯಕ್ಕೆ ತೀರ ವಿರುದ್ಧವಾದುದು. ಮಣ್ಣು, ಗೊಬ್ಬರ, ನೀರು, ಗಾಳಿ, ಬೆಳಕು ಇವೆಲ್ಲವನ್ನೂ ಬಳಸಿಕೊಂಡು ಬೆಳೆಯುವ ಮರವು ಸಮನ್ವಯಕ್ಕೆ ಒಂದು ಬಗೆಯ ಭೌತಿಕ ದೃಷ್ಟಾಂತವಾಗಬಲ್ಲದು. ಎಲ್ಲ ಬಗೆಯ ಪ್ರಭಾವಗಳಿಗೂ ಒಡ್ಡಿಕೊಂಡು ವ್ಯಕ್ತಿ ತನ್ನ ಕಾಲಮೇಲೆ ತಾನು ನಿಂತು ಅವೆಲ್ಲವನ್ನೂ ಅರಗಿಸಿಕೊಂಡು ಬೆಳೆದಾಗಲೇ ಅವನಲ್ಲಿ ನಿಜವಾದ ಸಮನ್ವಯ ಕಾಣುವುದು. ಸಮನ್ವಯವು ಹಲವು ಹತ್ತು ಅಂಶಗಳ ಮಿಶ್ರಣವಲ್ಲ. ಅವೆಲ್ಲ ಮಿಶ್ರವಾಗಿ, ಕ್ರಮೇಣ ಕರಗಿ, ಒಂದರಿಂದ ಒಂದು ಬೇರ್ಪಡಿಸಲಾರದಷ್ಟು ಸೇರಿಹೋಗಿ, ಅವೆಲ್ಲದರ ಗುಣಗಳನ್ನೂ ಒಳಗೊಂಡು ವ್ಯಕ್ತಿಯನ್ನು ಬೆಳೆಸುವ ಜೀವದ್ರವ್ಯವಾದಾಗಲೇ ನಿಜವಾದ ಸಮನ್ವಯವೆನಿಸಿಕೊಳ್ಳುತ್ತದೆ.

ಹೀಗೆ ಸ್ವಾಭಿಮಾನ ಮತ್ತು ಸಮನ್ವಯಗಳು ಹೆಸರಿಗೆ ಬೇರೆಯಾದರೂ ಬೆಳೆಯುವ ಅಥವಾ ಬೆಳೆದ ವ್ಯಕ್ತಿಯ ಎರಡು ಬಹು ಮುಖ್ಯ ಲಕ್ಷಣಗಳೂ ಆಗುತ್ತವೆ.

ಸಂಸ್ಕೃತಿ

ಮೇಲೆ ಸ್ವಾಭಿಮಾನ ಮತ್ತು ಸಮನ್ವಯಗಳನ್ನು ವ್ಯಕ್ತಿಯನ್ನು ಲಕ್ಷ್ಯದಲ್ಲಿರಿಸಿಕೊಂಡು ವಿವರಿಸಿದ್ದರೂ ಆ ಗುಣಗಳನ್ನು ಒಂದು ಒಟ್ಟು ಜನಾಂಗಕ್ಕೆ, ಒಂದು ಅಖಂಡ ಸಂಸ್ಕೃತಿಗೂ ಅನ್ವಯಿಸಬಹುದು. ಸಂಸ್ಕೃತಿಯು ಒಂದು ಜನತೆಯ ಸಮಗ್ರ ಜೀವನವಿಧಾನವನ್ನು ಹೇಳುತ್ತದೆ. ಅದು ಜನತೆ ಒಟ್ಟಾರೆ ಬಾಳುವ ರೀತಿಯಲ್ಲಿ ವ್ಯಕ್ತವಾಗುತ್ತಿದ್ದರೂ ಭೂಮಿಯಂತೆ ಜನರಿಗೆ ಆಶ್ರಯವನ್ನು ನೀಡಿ, ಅದರ ಜೊತೆಗೆ ಆಕಾಶವಾಗಿ ನಿಂತು ಆದರ್ಶಗಳ ಕಡೆ ಬೆಳೆಸುವ ಉತ್ತೇಜನವೂ ಆಗಿ ನಿಲ್ಲುತ್ತದೆ. ಜನತೆಯ ಧರ್ಮ, ಮೌಲ್ಯ, ಕಲೆಗಳು, ಸಾಹಿತ್ಯ, ರಾಜಕೀಯ ವಿಧಾನ, ಉಡುಗೆ ತೊಡುಗೆ, ಆಹಾರ ವಿಧಾನಗಳು, ಉತ್ಪಾದನಾ ವಿಧಾನ, ಶಿಕ್ಷಣ ಕ್ರಮ, ಆಚರಣೆ ಇತ್ಯಾದಿ ಎಲ್ಲವನ್ನೂ ಸಂಸ್ಕೃತಿ ಒಳಗೊಳ್ಳುತ್ತದೆ.

CC-O. In Public Domain. Digitized by eGangotri

CC-O. In Public Domain. Digitized by eGangotri

ಕರ್ನಾಟಕ ಸಂಸ್ಕೃತಿ: ಉಗಮ - ಕದಂಬರು

ಕರ್ನಾಟಕ ಸಂಸ್ಕೃತಿ ಅತ್ಯಂತ ಪ್ರಾಚೀನವಾದದ್ದು. ಗುಹಾನಿವಾಸಿಯಾಗಿದ್ದ ಆದಿಮಾನವ ಬರೆದ ಸಾವಿರಾರು ಬಂಡೆ ಚಿತ್ರಗಳು, ಗುಹಾ ಭಿತ್ತಿಚಿತ್ರಗಳು, ಅವನ ಶಿಲಾಯುಧಗಳು, ಬೃಹತ್ ಶಿಲಾ ಗೋರಿಗಳು ಕರ್ನಾಟಕದ ನೂರಾರು ಜಾಗಗಳಲ್ಲಿ ದೊರಕಿವೆ. ಆದರೆ ಕರ್ನಾಟಕ ಸಂಸ್ಕೃತಿ ತನ್ನೆಲ್ಲ ವೈಶಿಷ್ಟ್ಯಗಳೊಡನೆ ರೂಪುಗೊಳ್ಳಲು ಆರಂಭವಾದುದು ಒಂದು ಬಹು ಚಿಕ್ಕ, ಆದರೆ ಮುಂದಿನ ಪರಿಣಾಮಗಳ ದೃಷ್ಟಿಯಿಂದ ಅತ್ಯಂತ ಮಹತ್ವದ ಘಟನೆಯಿಂದ ಎಂದು ಹೇಳಿದರೆ ಆಶ್ಚರ್ಯಪಡಬೇಕಾಗಿಲ್ಲ. ಸುಮಾರು ಕ್ರಿ.ಶ. 325 ರಲ್ಲಿ ಶಿವಮೊಗ್ಗ ಜಿಲ್ಲೆಯ ತಾಳಗುಂದ ಎಂಬ ಅಗ್ರಹಾರದ ಮಯೂರಶರ್ಮ ಎಂಬ ಬ್ರಾಹ್ಮಣರ ಹುಡುಗ ಹೆಚ್ಚಿನ ಅಧ್ಯಯನಕ್ಕಾಗಿ ತಮಿಳುನಾಡಿನ ಕಂಚಿಗೆ ಹೋಗಿದ್ದಾಗ ಅಲ್ಲಿನ ಪಲ್ಲವ ಕ್ಷತ್ರಿಯರಿಂದ ಅಪಮಾನಿತನಾದ. ಕನ್ನಡ ಸಂಸ್ಕೃತಿಯ ಮೂಲದ್ರವ್ಯವನ್ನು ಹೊಂದಿದ್ದ ಆ ಹುಡುಗ ಅಪಮಾನವನ್ನು ನುಂಗಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ತಾನು ಬ್ರಾಹ್ಮಣನೆಂಬ ಕಾರಣಕ್ಕಾಗಿ ತನ್ನನ್ನು ಅಪಮಾನ ಮಾಡಿಸಿದರೆಂಬುದನ್ನೇ ಮನಸ್ಸಿನಲ್ಲಿಟ್ಟುಕೊಂಡು ಬ್ರಾಹ್ಮಣ್ಯವನ್ನೇ ತ್ಯಜಿಸಿ, ಕೈಯಲ್ಲಿ ಖಡ್ಗವನ್ನು ಹಿಡಿದು ಚಿತ್ರದುರ್ಗದ ಸಮೀಪದ ಚಂದ್ರವಳ್ಳಿಯ ಕಣಿವೆ ಪ್ರದೇಶದಲ್ಲಿ ನೆಲಸಿ ಸೈನ್ಯವನ್ನು ಕಟ್ಟಿ ಬಲಿಷ್ಠರಾಗಿದ್ದ ಪಲ್ಲವರನ್ನೇ ಸೋಲಿಸಿ ಅವರಿಂದಲೇ ಅಭಿಷಿಕ್ತನಾಗುತ್ತಾನೆ. ಬ್ರಾಹ್ಮಣ ಕದಂಬ ವಂಶವು ಹೀಗೆ ಕ್ಷತ್ರಿಯ ಕದಂಬ ವಂಶವಾಗಿ ಪರಿವರ್ತನೆಯನ್ನು ಹೊಂದಿತು. ಮಯೂರಶರ್ಮನ ಬಳಿಕ ಉಳಿದ ದೊರೆಗಳೆಲ್ಲ ಶರ್ಮ ಎಂದು ಕೊನೆಯಾಗುವ ಬ್ರಾಹ್ಮಣ ಸೂಚಕ ಹೆಸರುಗಳನ್ನು ತ್ಯಜಿಸಿ ವರ್ಮ ಎಂದು ಕೊನೆಯಾಗುವ ಕ್ಷಾತ್ರಸೂಚಕ ಹೆಸರುಗಳನ್ನಿಟ್ಟುಕೊಂಡರು.

ಕೇವಲ 'ಜಾತಿ ಕಲಹ' ಅಲ್ಲ

CC-O. Vidyanidhi Prakashana Trust Collection.

ಮೇಲಿನದು ಬರೀ ಜಾತಿ ಕಲಹವಾಗಿರಲಿಲ್ಲ ಒಂದು ಕ್ಷುದ್ರ ಜಗಳವಲ್ಲ. ಮಯೂರಶರ್ಮನೂ ತನಗಾದ ಅವಮಾನವನ್ನು ನುಂಗಿಕೊಂಡು

CC-O. In Public Domain. Digitized by eGangotri

ಕಂಚಿಯಿಂದ ಬ್ರಾಹ್ಮಣನಾಗಿಯೇ ಹಿಂದಿರುಗಿದ್ದರೆ ಕದಂಬವಂಶ ಇರುತ್ತಿರಲಿಲ್ಲ. ಬಹುಶಃ ಕರ್ನಾಟಕ ಚರಿತ್ರೆ ಈಗ ಇರುವ ರೀತಿಯಲ್ಲಂತೂ ಇರುತ್ತಿರಲಿಲ್ಲ. ಈ ಮಾತುಗಳನ್ನು ವಿವರಿಸುವ ಅಗತ್ಯವಿದೆ. ಕದಂಬರಿಗಿಂತ ಮೊದಲು ಕರ್ನಾಟಕವನ್ನು ಆಳುತ್ತಿದ್ದ ದೊರೆಗಳು ಉತ್ತರದ ಮೌರ್ಯರು. ಬಳಿಕ ಆಂಧ್ರದ ಶಾತವಾಹನರು. ಬಳಿಕ ತಮಿಳುನಾಡಿನ ಪಲ್ಲವರು. ಆ ದೊರೆಗಳಿಗೆ ಕರ್ನಾಟಕ ಸಂಸ್ಕೃತಿ ಬಗ್ಗೆಯಾಗಲೀ ಕನ್ನಡದ ಬಗ್ಗೆಯಾಗಲೀ ಹೇಗೆ ಮತ್ತು ಏಕೆ ಮಮತೆ ಬಂದೀತು? ನೆನಪಿಡಬೇಕು; ಕದಂಬವಂಶವೇ ಕರ್ನಾಟಕವನ್ನು ಆಳಿದ, ಕನ್ನಡವನ್ನು ಮನೆಮಾತಾಗಿ ಉಳ್ಳ ಮೊದಲ ಕನ್ನಡಿಗ ರಾಜವಂಶ. ಕನ್ನಡ ಜನ ತಮ್ಮನ್ನು ತಾವು ಆಳಿಕೊಳ್ಳಲು ಆರಂಭಿಸಿದ್ದು ಕದಂಬರ ಕಾಲದಿಂದ. ಸಹಜವಾಗಿಯೇ ಕದಂಬರಿಂದಾಗಿ ಕನ್ನಡ ಜನಕ್ಕೆ ಆತ್ಮವಿಶ್ವಾಸವು ಮೂಡಿತು. ಅವರು ಕನ್ನಡವನ್ನು ಆಡಳಿತ ಭಾಷೆಯಾಗಿ ಮತ್ತು ಸಾಂಸ್ಕೃತಿಕ ಭಾಷೆಯಾಗಿ ಬೆಳೆಸಿದರು.

ಅದೆಲ್ಲದರ ಚರಿತ್ರೆಗೆ ಹೋಗದೆ ಸೂಕ್ಷ್ಮವಾಗಿ ಹೇಳುವುದಾದರೆ, ಕನ್ನಡ ಸಂಸ್ಕೃತಿ ಉದಯವಾದುದೇ ಸ್ವಾಭಿಮಾನದಲ್ಲಿ, ಸ್ವಾಭಿಮಾನವನ್ನು ಉಳಿಸಿಕೊಳ್ಳುವಲ್ಲಿ. ಅಪಮಾನವನ್ನು ಸಹಿಸಿಕೊಳ್ಳದೆ, ಸ್ವಾಭಿಮಾನವನ್ನು ಬೆಳೆಸಿಕೊಳ್ಳುವ ಕೆಚ್ಚು ಮಯೂರಶರ್ಮನಲ್ಲಿ ಪ್ರಜ್ವಲಿಸಿತು. ಆ ಸ್ವಾಭಿಮಾನ ಫಲಗಳು ಕರ್ನಾಟಕ ಸಂಸ್ಕೃತಿಯ ಒಟ್ಟಂದದಲ್ಲಿ ಒಂದು ಮುಖ್ಯ ಲಕ್ಷಣವಾಗಿ ಉದ್ದಕ್ಕೂ ಕಾಣಿಸಿಕೊಂಡಿವೆ.

ಬಾದಾಮಿ ಚಾಲುಕ್ಯರು

ಕದಂಬ ರಾಜ್ಯದ ಉದಯದೊಂದಿಗೆ (ಕ್ರಿ.ಶ. 4ನೇ ಶತಮಾನ) ಕನ್ನಡ ಸಂಸ್ಕೃತಿಯ ಉದಯವೂ ಆಯಿತು. ಅದೇ ಕಾಲಕ್ಕೆ ದಕ್ಷಿಣದಲ್ಲಿ ಗಂಗರಾಜ್ಯದ ಉದಯವೂ ಆಯಿತು. ಕನ್ನಡ ಸಂಸ್ಕೃತಿ ದಕ್ಷಿಣ ಕರ್ನಾಟಕದಲ್ಲಿ ನೆಲೆಗೊಳ್ಳಲು ಅದೂ ಸಹಾಯಕವಾಯಿತು. ಸ್ವಾಭಿಮಾನಿ ಕನ್ನಡಿಗರಾಗಿದ್ದ ಆ ದೊರೆಗಳು ಪ್ರಾಕೃತ ಭಾಷೆಯನ್ನು ಕ್ರಮೇಣ ಕೈಬಿಟ್ಟು ಕನ್ನಡವನ್ನು ಆಡಳಿತದ ಭಾಷೆಯಾಗಿ ರೂಢಿಸಿಕೊಂಡರು. ಕನ್ನಡವು ಆಡುಭಾಷೆಯಾಗಿದ್ದುದು ಹೀಗೆ ಆಡಳಿತ ಭಾಷೆಯ ಸ್ಥಾನಕ್ಕೆ ಏರಿದುದಷ್ಟೇ ಅಲ್ಲದೆ ಸಾಹಿತ್ಯಗಳಪನ್ನ ಭಾಷೆಯೂ ಆಗಿ ಮೆರೆಯಲು ಬೀಜವಾಯಿತು. ಕದಂಬರ ಬಳಿಕ ಬಂದ ಬಾದಾಮಿ

CC-O. In Public Domain. Digitized by eGangotri

CC-O. In Public Domain. Digitized by eGangotri

ಚಾಲುಕ್ಯರ ಕಾಲವನ್ನು (6-8ನೇ ಶತಮಾನ) ಕರ್ನಾಟಕ ಸಂಸ್ಕೃತಿ ರೂಪುಗೊಂಡ ಕಾಲವೆಂದು ಚರಿತ್ರಕಾರರು ಗುರುತಿಸಿದ್ದಾರೆ. ಅವರ ಕಾಲದಲ್ಲಿ ಅದರಲ್ಲೂ ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ (ಕ್ರಿ.ಶ. 630) ಕನ್ನಡಿಗನ ಸ್ವಾಭಿಮಾನ, ಶೌರ್ಯ, ಧೈರ್ಯಗಳು ತಮ್ಮ ಚರಮಸೀಮೆಯನ್ನು ತಲುಪಿದವು. ಉತ್ತರಾಪಥೇಶ್ವರನೆಂದು ಬೀಗುತ್ತಿದ್ದ ಹರ್ಷನನ್ನು ಸೋಲಿಸಿ ನರ್ಮದೆಗಿಂತ ಆಚೆಗೆ ಅಟ್ಟುವಷ್ಟು ಕರ್ನಾಟಕ ಸೇನೆಯು ಬಲಿಷ್ಠವಾಗಿತ್ತು. ''ಕರ್ನಾಟ ಬಲ''ವೆಂದೇ ಚಾಲುಕ್ಯರ ಸೈನ್ಯವು ಭಾರತದಲ್ಲಿ ಎಲ್ಲೆಲ್ಲೂ ಪ್ರಖ್ಯಾತವಾಗಿತ್ತು. ಮತ್ತು ಅದನ್ನು ''ಅಜೇಯ''ವೆಂದೇ ಭಾರತದಲ್ಲಿ ಎಲ್ಲರೂ ಪರಿಗಣಿಸಿದ್ದರು.

ಹ್ಯುಯೆನ್‌ತ್ಸಾಂಗನ ಮಾತುಗಳು

ಪುಲಿಕೇಶಿಯ ರಾಜಧಾನಿಗೆ ಭೇಟಿ ಕೊಟ್ಟಿದ್ದ ಚೀನಿ ಪ್ರವಾಸಿ ಹ್ಯುಯೆನ್‌ತ್ಸಾಂಗನು ಆ ಮುಂಚೆ ಹರ್ಷನ ರಾಜಧಾನಿಗೂ ಭೇಟಿಕೊಟ್ಟಿದ್ದ. ಅವನು ಹರ್ಷನನ್ನು ಪುಲಿಕೇಶಿಯು ಯುದ್ಧದಲ್ಲಿ ಸೋಲಿಸಿ ಹಿಂದಕ್ಕಟ್ಟಿದ ಸಂಗತಿಯನ್ನು ಹೇಳಿದ್ದಾನೆ. ಈ ಸಂಗತಿ ಚಾಲುಕ್ಯರ ಸಮಕಾಲೀನ ಮತ್ತು ಮುಂದಿನ ಶಾಸನಗಳಲ್ಲಿ ಮಾರ್ದನಿಗೊಂಡಿದೆ. ಜೊತೆಗೆ, ಪುಲಿಕೇಶಿಯ ಪ್ರಜೆಗಳಾಗಿದ್ದ ಕನ್ನಡಿಗರನ್ನು ಕುರಿತಂತೆ ಅವನು ಆಡಿರುವ ಮಾತುಗಳು ಗಮನಾರ್ಹವಾಗಿವೆ. ಅವನ ಪ್ರಕಾರ ಅವರು ಶೂರರೂ ಸ್ವಾಭಿಮಾನಿಗಳೂ ನಿಷ್ಠಾವಂತರೂ ಆಗಿದ್ದರು. ಯುದ್ಧದಲ್ಲಿ ಸೋತು ಅವರಿಗೆ ತಿಳಿಯದು. ಅವರು ಯುದ್ಧಕ್ಕೆ ಹೋಗುವಾಗ ಅವರ ಹೆಂಡಿರು ಜಯವನ್ನು ಹಾರೈಸಿ ಯುದ್ಧರಂಗಕ್ಕೆ ಕಳುಹಿಸಿಕೊಡುತ್ತಿದ್ದರು. ಒಂದು ವೇಳೆ ಸೋತು ಹಿಂತಿರುಗಿದರೆ, ತಮ್ಮ ಪತ್ನಿಯರೇ ತಮಗೆ ಸೀರೆ, ಬಳೆ ಕುಂಕುಮಗಳನ್ನು ಕೊಟ್ಟು ಅಪಮಾನಪಡಿಸುವರೆಂದು ಹೆದರಿ ಹೋರಾಡಿ ಮಡಿಯುತ್ತಿದ್ದರೇ ಹೊರತು ಸೋತು ಹಿಂದಕ್ಕೆ ಬರುತ್ತಿರಲಿಲ್ಲ. ತಾವೂ ಮದ್ಯವನ್ನು ಕುಡಿದು ಆನೆಗಳಿಗೂ ಮದ್ಯವನ್ನು ಕುಡಿಸಿ ಯುದ್ಧಕ್ಕೆ ನುಗ್ಗುತ್ತಿದ್ದ ಅವರನ್ನು ತಡೆಯುವ ಮತ್ತೊಂದು ಸೇನೆ ಅಂದಿನ ಭಾರತದಲ್ಲಿರಲಿಲ್ಲ. ಅಂತಹ ಶೂರ ಸೈನಿಕರ, ಸ್ವಾಭಿಮಾನಿ ಪ್ರಜೆಗಳ ಪ್ರೀತಿಯ ಪುಲಿಕೇಶಿಯ ವಿಜಯಾವಾಸ ಕೋಟೆಯಾಗಿತ್ತು. ಹ್ಯುಯೆನ್‌ತ್ಸಾಂಗನ ಈ ಮಾತುಗಳು ಚಾಲುಕ್ಯರ ಕಾಲದ ವೀರಜೀವನಕ್ಕೆ

Siddyabharathi Book Centre, Sringeri

CC-O. In Public Domain. Digitized by eGangotri

ಒಂದು ಕಿಟಕಿಯನ್ನು ಒದಗಿಸುತ್ತವೆ.

ಸಮಕಾಲೀನ ಶಾಸನಾಧಾರ

ಇದಕ್ಕೆ ಸಮಕಾಲೀನ ಶಾಸನಗಳು ಪುಷ್ಟಿಕೊಡುತ್ತವೆ. ಏಳನೇ ಶತಮಾನದ ಬಾದಾಮಿ ಶಾಸನವೊಂದು ಹೀಗೆ ಹೇಳುತ್ತದೆ:

ವರಂ ತೇಜಸ್ವಿನೋ ಮೃತ್ಯುಃ ನ ತು ಮಾನಾವಖಿಂಡನಂ

ಮೃತ್ಯುಃ ತತ್‌ಕ್ಷಣಿಕೋ ದುಃಖಿಂ ಮಾನಭಂಗಂ ದಿನೇ ದಿನೇ

ಶೂರರಿಗೆ ಅಪಮಾನಕ್ಕಿಂತ ಮೃತ್ಯುವೇ ಶ್ರೇಷ್ಠವಾದುದು. ಏಕೆಂದರೆ ಮೃತ್ಯುವು ಕ್ಷಣಿಕ ದುಃಖವನ್ನು ತರುತ್ತದೆ. ಮಾನಭಂಗವಾದರೋ ದಿನ ದಿನವೂ ದುಃಖವನ್ನು ತರುತ್ತದೆ. ಇಂತಹ ಶೂರನೊಬ್ಬನ ವರ್ಣನೆ ಬಾದಾಮಿಯ ಶಾಸನದಲ್ಲಿ ಅದೇ ಕಾಲದಲ್ಲಿ ದೊರಕುತ್ತದೆ.

ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ,
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್,
ಮಾಧವನೀತನ್ ಪೆರನಲ್ಲ

ಕಪ್ಪೆ ಅರಭಟ್ಟನೆಂಬ ಸ್ವಾಭಿಮಾನಿಯು ಒಳ್ಳೆಯವರಿಗೆ ಒಳ್ಳೆಯವನೂ ಕೆಟ್ಟವರಿಗೆ ತೀರ ಕೆಟ್ಟವನೂ ಆಗಿದ್ದನಂತೆ. ಅವನನ್ನು ಹೋಲುವ ಸಾವಿರಾರು ವೀರಯೋಧರ ವರ್ಣನೆಗಳು ಕರ್ನಾಟಕದ ಶಾಸನಗಳಲ್ಲಿ ದೊರಕುತ್ತವೆ. ಕರ್ನಾಟಕದಲ್ಲಿ ದೊರಕುವಷ್ಟು ವೀರಗಲ್ಲುಗಳು ಭಾರತದ ಯಾವುದೇ ಭಾಗದಲ್ಲೂ ದೊರಕುವುದಿಲ್ಲ. ಶೂರರ ನಾಡು ಕರ್ನಾಟಕ.

ಕ್ಷಾತ್ರ ಪರಂಪರೆ: ಪಂಪ

ಈ ಕ್ಷಾತ್ರ ಪರಂಪರೆಗೆ ನಮ್ಮ ಹಲವು ಕವಿಗಳು ಸೇರಿದ್ದಾರೆ. ಹತ್ತನೆಯ ಶತಮಾನದ ಪಂಪನು ಸ್ವತಃ ಶೂರನೂ ಕವಿಯೂ ಆಗಿದ್ದ. ಕೈಯಲ್ಲಿ ಲೇಖನಿ ಹಿಡಿದು ಕಾವ್ಯಗಳನ್ನು ಬರೆದಂತೆಯೇ ಖಡ್ಗವನ್ನು ಹಿಡಿದು ಯುದ್ಧವನ್ನೂ ಮಾಡುತ್ತಿದ್ದ. ತಾನು ಕಲಿಯೂ ಹೌದು, ಕವಿಯೂ ಹೌದು ಎಂದು ಅವನೇ ಹೇಳಿಕೊಂಡಿದ್ದಾನೆ. ಅವನು ಆರಿಸಿಕೊಂಡ ಭಾರತದಲ್ಲಿ ಪ್ರಸಿದ್ಧವಾದ ಮಹಾಭಾರತದ ಕತೆಯನ್ನೇ ಹೇಳಿದ್ದರೂ ಅದರಲ್ಲಿ ಕೃಷ್ಣನಾಗಲಿ

Sri Vidyaprasanna Bharathi Book Centre, Shimoga

CC-O. In Public Domain. Digitized by eGangotri

ಧರ್ಮರಾಯನಾಗಲಿ ಯಾರೂ ಮುಖ್ಯರಲ್ಲ. ತನ್ನ ಕಥಾನಾಯಕ ಅರ್ಜುನನೆಂದು ಹೇಳಿಕೊಂಡಿದ್ದರೂ ಪಂಪಭಾರತದಲ್ಲಿ ಅರ್ಜುನನಿಗಿಂತ ದುರ್ಯೋಧನ ಒಂದು ಪಾತ್ರವಾಗಿ ಮೇಲೆದ್ದು ಕಾಣುತ್ತಾನೆ. ದುರ್ಯೋಧನನ ವಿಷಯದಲ್ಲಿ ಓದುಗರಿಗೆ ಪ್ರೀತಿ, ಅಭಿಮಾನಗಳು ಮೂಡುವಂತೆ ಕವಿ ಚಿತ್ರಿಸಿದ್ದಾನೆ. ಮೇಲ್ನೋಟಕ್ಕೆ ಇದು ವಿರೋಧದಂತೆ ಕಂಡರೂ ಅದು ವಿರೋಧದ ತೋರಿಕೆಯೇ ಹೊರತು ವಾಸ್ತವ ವಿರೋಧವಲ್ಲ. ಪಂಪ ಇದ್ದುದು ಕ್ಷಾತ್ರಯುಗದಲ್ಲಿ; ಅವನು ಕರ್ನಾಟಕದ ಸಂಸ್ಕೃತಿಯ ಸಾರವನ್ನು ತನ್ನ ಕೃತಿಗಳಲ್ಲಿ ಹಿಡಿದಿಡುವ ಯತ್ನವನ್ನು ಮಾಡಿದ. ತನ್ನ ಕಾಲದ ಪ್ರಮುಖ ಮೌಲ್ಯಗಳನ್ನು ಪ್ರತಿಪಾದಿಸುವುದರ ಮೂಲಕ ಅಂದಿನ ಯುಗಶಕ್ತಿಯನ್ನು ತನ್ನ ಕಾವ್ಯದಲ್ಲಿ ಹಿಡಿದಿಟ್ಟ. ಕ್ಷಾತ್ರಯುಗದ ಶೌರ್ಯ ಸ್ವಾಭಿಮಾನಗಳಿಗೆ ದುರ್ಯೋಧನ ಒಳ್ಳೆಯ ಪ್ರತೀಕ. ತನಗೆ ಎಲ್ಲರ ಮುಂದೆ ದ್ರೌಪದಿ ಅವಮಾನ ಮಾಡಿದ್ದನ್ನು ನುಂಗಿಕೊಳ್ಳಲಾಗಲಿಲ್ಲ. ಯಾರು ಏನೇ ಹೇಳಲಿ, ಹಠ ಹಿಡಿದು ತನ್ನ ಚಲವನ್ನು ಪಾಂಡವರ ವಿರುದ್ಧವಾಗಿ ತೀರಿಸಿಕೊಳ್ಳಲು ಪ್ರತಿಜ್ಞೆ ಮಾಡಿದ. ತನ್ನ ಬಂಧು ಬಾಂಧವರು ಅಪಾರ ಸೇನೆ ಎಲ್ಲವನ್ನೂ ಆ ಚಲಕ್ಕಾಗಿ ಕಳೆದುಕೊಂಡ; ಕೊನೆಗೆ ತನ್ನನ್ನೇ ನೀಗಿಕೊಂಡ. ಪಂಪ ಅದಕ್ಕಾಗಿಯೇ ''ಚಲದೊಳ್ ದುರ್ಯೋಧನಂ'' ಎಂದು ಹೊಗಳಿ ತನ್ನ ಪ್ರಶಸ್ತಿ ಪದ್ಯದಲ್ಲಿ ಆ ಪಾತ್ರಕ್ಕೆ ಮೊದಲಮಣೆಯನ್ನು ಕೊಟ್ಟಿದ್ದಾನೆ. ಪಂಪನ ಜೊತೆ ರನ್ನನೂ ತನ್ನ ಧ್ವನಿ ಸೇರಿಸಿದ್ದಾನೆ. ತನ್ನ ಗದಾಯುದ್ಧದಲ್ಲಿ ದುರ್ಯೋಧನನನ್ನು 'ಮಹಾನುಭಾವ' ನೆಂದೂ 'ಅಭಿಮಾನಧನ' ನೆಂದೂ ರನ್ನ ಹೊಗಳಿದ್ದಾನೆ.

ಸ್ವಾಭಿಮಾನ: ವಚನಕಾರರು

ಇತರ ಮತ್ತು ಇಂತಹ ಹಲವು ಉದಾಹರಣೆಗಳ ಸಾರಾಂಶ-ಕರ್ನಾಟಕವು ಸ್ವಾಭಿಮಾನವನ್ನು ಒಂದು ಶ್ರೇಷ್ಠ ಮೌಲ್ಯವೆಂಬಂತೆ ಕಾಪಾಡಿಕೊಂಡು ಬಂದಿತು. ಈ ಸ್ವಾಭಿಮಾನವು ವಚನಕಾರರ ಯುಗದಲ್ಲಿ (ಹನ್ನೆರಡನೆಯ ಶತಮಾನದಲ್ಲಿ) ಒಂದು ಸಾಮಾಜಿಕ ಚಳವಳಿಯ ರೂಪದಲ್ಲಿಯೂ ವ್ಯಕ್ತವಾಗಿದೆ. ಸಾಮಾಜಿಕ, ಧಾರ್ಮಿಕ, ಆರ್ಥಿಕ ಅಸಮಾನತೆಗಳ ವಿರುದ್ಧವಾಗಿ ಬಿರಿದೆದ್ದ ಅಜಗಣ್ಣ ಅಂಬಿಗರ ಚೌಡಯ್ಯನು ಧಿಕ್ಕರಿಸಿ ನಿಂತು ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿದರು. ಯಾವುದೇ ಜಾತಿಯಲ್ಲಿ ಹುಟ್ಟಿದರೂ

Sri Vidyabharathi Book Centre, Sirsi

CC-O. In Public Domain. Digitized by eGangotri

ಅವನು ಬೆಳೆದು ವ್ಯಕ್ತಿತ್ವವನ್ನು ಸಾಧಿಸಿಕೊಳ್ಳಲು ಅವನ ಜಾತಿ ಅಡ್ಡಿಯಾಗದು ಎಂಬ ತತ್ವವನ್ನು ಪ್ರತಿಪಾದಿಸಿದರು. ಆದರಲ್ಲೂ, ಸಮಾಜದ ಕೆಳವರ್ಗದ ಜನರಿಗೆ ಆತ್ಮಾಭಿಮಾನವನ್ನೂ, ಸ್ವಾವಲಂಬನೆಯನ್ನೂ ತಂದು ಕೊಟ್ಟುದು ಆ ಚಳವಳಿಯ ದೊಡ್ಡ ಸಿದ್ಧಿಗಳಲ್ಲಿ ಒಂದು. ಇದಕ್ಕೆ ಒಂದು ಐತಿಹಾಸಿಕ ನಿದರ್ಶನವೂ ಉಂಟು. ದಲಿತವರ್ಗದ ಜನಕ್ಕೆ ಸಾಮಾನ್ಯವಾಗಿ ಊರೊಳಗೆ ಪ್ರವೇಶವಿರಲಿಲ್ಲ. ಅವರು ಬಂದರೂ ಕೈಯಲ್ಲಿ ಕೋಲು ಹಿಡಿದು ಕುಟ್ಟುತ್ತ 'ಸಂಬೋಳಿ' ಎಂದು ಮತ್ತೆ ಮತ್ತೆ ಕೂಗುತ್ತ ಜನರು ತಮ್ಮಿಂದ ದೂರವಿರಲಿ ಎಂದು ಎಚ್ಚರಿಸುತ್ತ ಬರುತ್ತಿದ್ದರು. ಈ ಪದ್ಧತಿ ಬಹುಕಾಲದಿಂದ ನಡೆದು ಬಂದುದರಿಂದ ಎಲ್ಲ ದಲಿತರೂ ಅದು ತಮ್ಮ ಜಾತಿಯ ಪದ್ಧತಿ, ತಮಗೆ ಸ್ವಾಭಾವಿಕವಾಗಿ ಅನ್ವಯವಾದುದು ಎಂದೇ ಭಾವಿಸುತ್ತಾ ಬಂದಿದ್ದರು. ವಚನಕಾರರು ದಲಿತರ ಸುಧಾರಣೆಗೆ ಯತ್ನಿಸಿ ಅವರ ಬಳಿ ತಾವು ಹೋಗಿ ಅವರನ್ನು ತಮ್ಮ ಸಮೀಪ ಬರಮಾಡಿ ಸಮಾನತೆಯ ತತ್ವದ ಮೇಲೆ ಅವರ ಜೊತೆ ವ್ಯವಹರಿಸಲು ಆರಂಭಿಸಿದುದರ ಪರಿಣಾಮವಾಗಿ ಅವರಲ್ಲಿ ಹಲವರು ತಮ್ಮ ಹಕ್ಕುಗಳ ಬಗ್ಗೆ ಪ್ರಶ್ನಿಸಲಾರಂಭಿಸಿದರು. ಸಂಬೋಳಿ ನಾಗಿದೇವ ಎಂಬ ದಲಿತ ಧೈರ್ಯಮಾಡಿ, ಕಲ್ಯಾಣ ಪಟ್ಟಣದಲ್ಲಿ ಸಂಚರಿಸುವಾಗ 'ಸಂಬೋಳಿ' ಎಂದು ಕೂಗುವುದನ್ನು ನಿಲ್ಲಿಸಿದ. ಈ ಚಿಕ್ಕ ಐತಿಹಾಸಿಕ ಘಟನೆ ಮೇಲ್ನೋಟಕ್ಕೆ ಕ್ಷುದ್ರವೆಂದೂ ಗಮನಾರ್ಹವಲ್ಲವೆಂದೂ ತೋರಿದರೂ, ಅದು ದಲಿತವರ್ಗದಲ್ಲಿ ಉಂಟಾಗಿದ್ದ ಒಂದು ವಿನೂತನ ಹೊಸ ಪ್ರಜ್ಞೆಯನ್ನೂ ಸ್ವಾಭಿಮಾನವನ್ನೂ ತೋರುತ್ತದೆ. ಈ ಬಗೆಯ ಇನ್ನೂ ಹಲವು ಉದಾಹರಣೆಗಳು ಉಂಟು.

ಇದು ಚರಿತ್ರೆ: ಕರ್ನಾಟಕದ ಸಂಸ್ಕೃತಿಯ ಪ್ರಮುಖ ಲಕ್ಷಣಗಳಲ್ಲಿ ಸ್ವಾಭಿಮಾನವು ಮುಖ್ಯವಾದುದು ಎಂಬುದನ್ನು ಸಮರ್ಥಿಸಲು ಹಲವು ಸಾಕ್ಷಿಗಳನ್ನು ಒದಗಿಸಬಹುದು. ಸ್ವಾಭಿಮಾನವು ಅಹಂಕಾರವಾಗದೆ, ಬೆಳವಣಿಗೆಗೆ ಅವಕಾಶ ಕೊಡುವ ಗುಣವಾಗಿ ಪರಿವರ್ತನೆ ಹೊಂದಲು ಸಮನ್ವಯ ಎನ್ನುವ ಮೌಲ್ಯ ಸಹಾಯಕವಾಯಿತು.

ಸಮನ್ವಯ

Sri Vidyabharathi Book Centre, Sringeri

ಸ್ವಾಭಿಮಾನವನ್ನೂ ಸ್ವಂತಿಕೆಯನ್ನೂ ಆತ್ಮವಿಶ್ವಾಸವನ್ನೂ ಬೆಳೆಸಿಕೊಂಡ

CC-O. In Public Domain. Digitized by eGangotri

ಕರ್ನಾಟಕ ಸಂಸ್ಕೃತಿಯು ಸಮನ್ವಯವನ್ನು ಸಾಧಿಸಿ ತೋರಿಸಿರುವ ರೀತಿ ಆಶ್ಚರ್ಯವನ್ನು ಹುಟ್ಟಿಸುತ್ತದೆ. ಆರೋಗ್ಯಶಾಲಿ ಮನುಷ್ಯ ಆಹಾರ ಪಾನೀಯಗಳನ್ನು ತೆಗೆದುಕೊಂಡು ಅವು ತನ್ನ ಭಾಗವಾಗುವಂತೆ ಅರಗಿಸಿಕೊಂಡು ಅವು ತನ್ನ ಬೆಳವಣಿಗೆಗೆ ಸಹಾಯಕವಾಗುವಂತೆ ಮಾಡಿಕೊಳ್ಳುವ ರೀತಿಯಲ್ಲಿ ಸತ್ವಶಾಲಿಯಾದ ಯಾವುದೇ ಸಂಸ್ಕೃತಿಯು ತನಗಿಂತ ಹೊರಗಿನ ಅಂಶಗಳನ್ನು ಸ್ವೀಕರಿಸಿದರೂ ಅವೆಲ್ಲವನ್ನೂ ಅರಗಿಸಿಕೊಂಡು ತನ್ನ ಬೆಳವಣಿಗೆಗೆ ಅವು ಪೋಷಕವಾಗುವಂತೆ ಮಾಡಿಕೊಳ್ಳುತ್ತದೆ. ಅವುಗಳಲ್ಲಿ ತನ್ನ ವಿಕಾಸಕ್ಕೆ ಅಗತ್ಯವಾದುವನ್ನು ತೆಗೆದುಕೊಂಡು ಉಳಿದುವನ್ನು ತಿರಸ್ಕರಿಸುತ್ತದೆ. ಈ ಕ್ರಿಯೆ- ಈ ಸಾಂಸ್ಕೃತಿಕ ಸಮನ್ವಯವು ಕರ್ನಾಟಕದಲ್ಲಿ ಕಂಡುಬಂದಿರುವ ರೀತಿಯನ್ನು ನೋಡೋಣ.

ಭಾಷೆ - ಸಾಹಿತ್ಯ

ಕನ್ನಡವು ಸಂಸ್ಕೃತ, ಹಿಂದಿ, ಮರಾಠಿ, ಗುಜರಾತಿ ಆರ್ಯನ್ ಭಾಷಾವರ್ಗಕ್ಕಿಂತ ಭಿನ್ನವಾದ ದ್ರಾವಿಡ ಭಾಷಾವಂಶಕ್ಕೆ ಸೇರಿದೆ. ಅದಕ್ಕೆ ತನ್ನದೇ ಆದ ವೈಶಿಷ್ಟ್ಯಗಳಿವೆ. ಆದರೂ ಕನ್ನಡ ಭಾಷೆಯು ಎಲ್ಲ ಭಾಷೆಗಳಿಂದಲೂ ತನಗೆ ಅಗತ್ಯವಾದ ಪದಗಳನ್ನು ಸ್ವೀಕರಿಸುತ್ತ ಬೆಳೆದಿದೆ. ಸಂಸ್ಕೃತದಿಂದ ಯಥೇಚ್ಛವಾಗಿ ಪದಗಳನ್ನು ಸ್ವೀಕರಿಸಿದರೂ ಅವು ಬಂದು ಕನ್ನಡದ ದೇಸಿ ಪದಗಳನ್ನು ಹಿಂದಕ್ಕೆ ಹಾಕಲಿಲ್ಲ. ಕನ್ನಡ ಭಾಷೆ ತನ್ನ ಸತ್ವವನ್ನು ಕಳೆದುಕೊಳ್ಳುವಷ್ಟು ಸಂಸ್ಕೃತಕ್ಕೆ ಮಾರುಹೋಗಲಿಲ್ಲ. ಸಂಸ್ಕೃತ ಪದಗಳು ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡೇ ಬಳಕೆಯಾಗಿವೆ. ಅಲ್ಲಿಂದಲೂ ಪ್ರಾಕೃತದಿಂದಲೂ ಬಂದ ತದ್ಭವಗಳಂತೂ ಕನ್ನಡ ದೇಶ್ಯ ಪದಗಳೇ ಎನ್ನುವಷ್ಟು ಕನ್ನಡ ನುಡಿಯೊಡನೆ ಸಮರಸವಾಗಿ ಬೆರೆತವು. ಹಿಂದಿನ ಕನ್ನಡ ಸಾಹಿತ್ಯವೂ ಅಷ್ಟೇ; ಮಡಿವಂತಿಕೆಯನ್ನು ಇಟ್ಟುಕೊಳ್ಳದೆ, ಹಾಗೆಂದು ಉಳಿದ ಸಾಹಿತ್ಯಗಳ ಪ್ರಭಾವಕ್ಕೆ ತಾನು ಸಂಪೂರ್ಣವಾಗಿ ಶರಣಾಗತವಾಗದೆ, ಎಲ್ಲ ಸಾಹಿತ್ಯಗಳಿಂದ ಪ್ರೇರಣೆ ಪ್ರಚೋದನೆಗಳನ್ನು ಸ್ವಾಗತಿಸಿ ಸ್ವತಂತ್ರ ಸಾಹಿತ್ಯವನ್ನು ಕನ್ನಡವು ಬೆಳೆಸಿಕೊಂಡಿತು. ಚಂಪೂ, ವಚನ, ರಗಳೆ, ಷಟ್ಪದಿ, ಸಾಂಗತ್ಯ ಈ ಯಾವ ಪ್ರಕಾರಗಳನ್ನು ತೆಗೆದುಕೊಂಡರೂ ಕನ್ನಡವು ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಿದೆ. ಪಂಪ, ರನ್ನ, ಕುಮಾರವ್ಯಾಸರು ಮಹಾಭಾರತದ

Sri Vidyabharathi Book Centre, Sringeri

CC-O. In Public Domain. Digitized by eGangotri

ವಸ್ತುವನ್ನು ಆರಿಸಿಕೊಂಡಿದ್ದರೂ ಅವು ಕನ್ನಡದ ನೆಲಕ್ಕೆ ಹೊಂದಿಕೊಂಡಿವೆ. ಕಥೆ ಹಲವು ಶತಮಾನಗಳಷ್ಟು ಹಿಂದಿನದಾದರೂ ಆ ಕತೆಯ ಮೂಲಕ ತಮ್ಮ ಸಮಕಾಲೀನ ಕ್ಷೇತ್ರದ ವಾತಾವರಣವನ್ನು ಅಲ್ಲಿ ಮೂಡಿಸಿದ್ದಾರೆ. ವಚನ ಸಾಹಿತ್ಯವಂತೂ ಕನ್ನಡದ್ದೇ ಎಂಬಷ್ಟು ಸ್ವಂತಿಕೆಯನ್ನು ಹೊಂದಿರುವ ಸಾಹಿತ್ಯವಾಗಿದ್ದು ಅದು ವಿಶ್ವಸಾಹಿತ್ಯಕ್ಕೆ ಕನ್ನಡವು ಕೊಟ್ಟ ಅತ್ಯಂತ ಮಹತ್ವದ ಕಾಣಿಕೆಯಾಗಿದೆ. ಸ್ವಂತ ಅನುಭವ, ಸಾಮಾಜಿಕ ಕಳಕಳಿಗಳ ದೃಷ್ಟಿಯಿಂದ ವಚನಸಾಹಿತ್ಯದ ಜೊತೆ ಹೋಲಿಸಲು ಭಾರತದಲ್ಲಿ ಮತ್ತೊಂದು ಉದಾಹರಣೆ ನಿಶ್ಚಿತವಾಗಿಯೂ ದೊರಕುವುದಿಲ್ಲ. ಭಕ್ತಿ, ಭಾವಗಳಲ್ಲಿ ಪುರಂದರದಾಸರ ಕೀರ್ತನೆಗಳಿಗೆ ತ್ಯಾಗರಾಜರ ತೆಲುಗು ಕೃತಿಗಳು ಹೋಲಿಕೆಯಾಗಬಹುದು.

'ಕರ್ನಾಟಕ ಸಂಗೀತ'

ದಕ್ಷಿಣ ಭಾರತದ ದಕ್ಷಿಣಾದಿ ಸಂಗೀತ ಪರಂಪರೆಗೆ 'ಕರ್ನಾಟಕ ಸಂಗೀತ'ವೆಂಬ ಹೆಸರು ಇದೆ. ಇದಕ್ಕೆ ಕಾರಣ, ಆ ಸಂಗೀತ ಪರಂಪರೆಯು ಹುಟ್ಟಿ ಬೆಳೆದುದು ಕರ್ನಾಟಕದಲ್ಲಿ. ಶ್ರೇಷ್ಠ ವಾಗ್ಗೇಯಕಾರರಿದ್ದುದು ಕರ್ನಾಟಕದಲ್ಲಿ; ಸಂಗೀತಶಾಸ್ತ್ರ ಗ್ರಂಥಗಳನ್ನು ರಚಿಸಿದವರಿದ್ದುದು ಕರ್ನಾಟಕದಲ್ಲಿ. ನಾನ್ಯದೇವ, ಸೋಮೇಶ್ವರ ಚಕ್ರವರ್ತಿ, ಕಲ್ಲಿನಾಥ, ಪುಂಡರೀಕ ವಿಠ್ಠಲ, ಶಾರ್ಙ್ಗದೇವ ಇವರ ಹೆಸರುಗಳು ಕರ್ನಾಟಕ ಸಂಗೀತದ ಚರಿತ್ರೆಯಲ್ಲಿ ಬಹು ಮುಖ್ಯವಾದವು. ನಿಜಗುಣ ಶಿವಯೋಗಿಗಳು ಸಂಗೀತ ಶಾಸ್ತ್ರಕಾರರೂ ಅಂತೆಯೇ ಉನ್ನತ ಮಟ್ಟದ ವಾಗ್ಗೇಯಕಾರರೂ ಆಗಿದ್ದಾರೆ. ಪುರಂದರದಾಸರ ಹೆಸರು ಕರ್ನಾಟಕ ಸಂಗೀತದ ಚರಿತ್ರೆಯಲ್ಲಿ ಅಗ್ರ ಉಲ್ಲೇಖಾರ್ಹ. ತಮಿಳಿನಲ್ಲಿ 'ಕರ್ನಾಟಕ' ಪದಕ್ಕೆ ಸಂಪ್ರದಾಯ ಮತ್ತು ಶುದ್ಧ ಎಂಬರ್ಥಗಳೂ ಇವೆ. ದಕ್ಷಿಣಾದಿ ಸಂಗೀತವೂ ಸಂಗೀತಶಾಸ್ತ್ರವೂ ಬೆಳೆದು ಒಂದು ವ್ಯವಸ್ಥಿತ ಆಕಾರವನ್ನು ಪಡೆದುದು ಕರ್ನಾಟಕದಲ್ಲಿ ಎಂಬುದು ಬಹುತೇಕ ಆಧುನಿಕ ಸಂಗೀತ ಶಾಸ್ತ್ರಜ್ಞರೆಲ್ಲರೂ ಒಕ್ಕೊರಲಿನಿಂದ ಒಪ್ಪಿಕೊಂಡಿರುವ ಮಾತು. ಕರ್ನಾಟಕದ ಹಿಂದಿನ ಕಾವ್ಯಗಳನ್ನೂ ಶಾಸನಗಳನ್ನೂ ನೋಡಿದರೆ ಕನ್ನಡ ಜನ ಸಂಗೀತ ಕಲೆಯನ್ನು ಸರ್ವಾಂಗೀಣವಾಗಿ ಬೆಳೆಸಿದ್ದು ಚಿತ್ರವು ಮೂಡಿಕೊಡುತ್ತದೆ. ಒಂದೊಂದು ಮನೆಯೂ ಮನೋಹರ ಸಂಗೀತದಿಂದ ನಿನದಿಸುತ್ತಿತ್ತು ಎಂಬಂತಹ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತುಗಳು ತಾಳಗುಂದ ಮತ್ತು ಇತರ ಕಡೆಗಳಲ್ಲಿ ದೊರಕಿರುವ ನೂರಾರು ಶಾಸನಗಳಲ್ಲಿ ದೊರಕುತ್ತವೆ. ಭಾರತದ ಎಲ್ಲ ಕಡೆಯ ಸಂಗೀತ ಪರಂಪರೆಗಳ ಸಾರವನ್ನು ತೆಗೆದುಕೊಂಡು ತನ್ನದೇ ಆದ ಕರ್ನಾಟಕದ ಸಂಗೀತ ಶೈಲಿಯನ್ನು ರೂಪಿಸಿ ಗಾನಪ್ರಪಂಚಕ್ಕೆ ತನ್ನ ಅಪೂರ್ವ ಕಾಣಿಕೆಯಾಗಿ ಕೊಟ್ಟ ಹೆಗ್ಗಳಿಕೆ ಕರ್ನಾಟಕದ್ದು.

ನೃತ್ಯ ಮತ್ತು ಚಿತ್ರಕಲೆ

ತಮಿಳುನಾಡು, ಕೇರಳ, ಆಂಧ್ರ ಪ್ರದೇಶಗಳಿಗೆ ಅವುಗಳದೇ ಆದ ದೇಶೀಯ ನೃತ್ಯ ಶೈಲಿಗಳಿರುವಂತೆ ಕರ್ನಾಟಕಕ್ಕೆ ಇದೆಯೇ, ಇತ್ತೇ ಎಂಬ ಪ್ರಶ್ನೆಯನ್ನು ಹಲವರು ಎತ್ತಿ ಅಂತಹ ವಿಶಿಷ್ಟ ಶೈಲಿ ಕರ್ನಾಟಕಕ್ಕೆ ಇರಲಿಲ್ಲವೆಂದು ವಾದಿಸಿದ್ದಾರೆ. ಆದರೆ ಈ ವಿಷಯದಲ್ಲಿ ಈಚೆಗೆ ಸಂಶೋಧನೆ ನಡೆಸಿರುವ ಡಾ. ಚೂಡಾಮಣಿ ನಂದಗೋಪಾಲ್ ಅವರು ಕರ್ನಾಟಕಕ್ಕೆ ತನ್ನದೇ ಆದ ವಿಶಿಷ್ಟ ನೃತ್ಯ ಪರಂಪರೆಯಿದ್ದಿತೆಂದು ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಸೋಮನಾಥಪುರಗಳ ದೇವಾಲಯಗಳ ಶಿಲ್ಪಗಳ ಆಧಾರದಿಂದಲೂ ಕನ್ನಡ ಕಾವ್ಯ ಶಾಸನಗಳಲ್ಲಿ ಬರುವ ನರ್ತನಗಳ ಆಧಾರದಿಂದಲೂ ಸಮರ್ಥಿಸಿದ್ದಾರೆ. ಸಾಂಗತ್ಯ ಕವಿ ರತ್ನಾಕರವರ್ಣಿಯು ತನ್ನ 'ಭರತೇಶ ವೈಭವ' ಕಾವ್ಯದಲ್ಲಿ ನರ್ತನಶಾಲೆಯ ವರ್ಣನೆಯನ್ನಲ್ಲದೆ, ದಿಕ್ಕನ್ನಿಕಾ ನಾಟ್ಯ, ಜಲಕನ್ನಿಕಾ ನಾಟ್ಯಗಳಂತಹ 'ಬ್ಯಾಲೆ'ಗಳನ್ನು ವರ್ಣಿಸಿದ್ದಾನೆ. ಆ ವರ್ಣನೆಗಳ ಆಧಾರದ ಮೇಲೆ ಇಂದಿಗೂ ಹೊಸ ಬ್ಯಾಲೆಗಳನ್ನು ರೂಪಿಸಬಹುದು. ಶಾಂತಲೆ ಒಬ್ಬ ಅದ್ವಿತೀಯ ಅಸಮಾನ ನರ್ತಕಿಯಾಗಿದ್ದಳು. ಬಾದಾಮಿ ತಾಲ್ಲೂಕಿನ ಒಂದು ಶಾಸನವು ಅಚಲದ ಎಂಬ ನರ್ತಕನ ವರ್ಣನೆಯನ್ನು ಮಾಡಿದೆ. ಏಳನೇ ಶತಮಾನದ ಆ ಕನ್ನಡಿಗ ನಟನ 'ಸಿಂಹನಾದ' ವನ್ನು ಕೇಳಿದರೆ ಸಾಕು, ಉಳಿದ ನಟರು ತಮ್ಮ ಅಹಂಕಾರವನ್ನು ಉಡುಗಿಸಿಕೊಂಡು ತೆಪ್ಪಗಾಗುತ್ತಿದ್ದರೆಂದೂ ಅವನ ನರ್ತನ ಕಲೆಯ ವಜ್ರಾಘಾತಕ್ಕೆ ಉಳಿದ ನಟರೆಂಬ ಪರ್ವತಗಳು ನೆಲಸಮವಾಗುತ್ತಿದ್ದವೆಂದೂ ವರ್ಣನೆಯಿದೆ. ಚೀರಘಟ್ಟೆ ಎಂಬ ಒಬ್ಬ ಚಿತ್ರ ಕಲಾವಿದ ರಾಷ್ಟ್ರಕೂಟರ ಕಾಲದಲ್ಲಿ ಅಖಿಲ ಭಾರತ ಮಟ್ಟದ ಕೀರ್ತಿಯನ್ನು ಪಡೆದಿದ್ದನಂತೆ. ಅಜಂತಾ ಚಿತ್ರಕಲೆ ವಾಸ್ತವವಾಗಿ ಕರ್ನಾಟಕದ್ದೇ. ಏಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಟನೆ ಶತಮಾನಗಳಲ್ಲಿ ಎಲ್ಲೋರ-ಅಜಂತಾಗಳು ಕನ್ನಡ ಮಾತನಾಡುವ ಜನರಿದ್ದ ಪ್ರದೇಶಗಳಾಗಿದ್ದವು.

ಶಿಲ್ಪ - ವಾಸ್ತುಶಿಲ್ಪ

ಕರ್ನಾಟಕವು ಉತ್ತರದ ನಾಗರ, ದಕ್ಷಿಣದ ದ್ರಾವಿಡ ಎಂಬ ಎರಡು ವಾಸ್ತುಶಿಲ್ಪ ಕಲೆಗಳ ಸಂಗಮವಾಗಿದ್ದಿತು. ಐಹೊಳೆ, ಪಟ್ಟದಕಲ್ಲುಗಳಲ್ಲಿ ಈ ಎರಡೂ ಶೈಲಿಗಳ ಸಂಗಮವನ್ನು ನೋಡುತ್ತೇವೆ. ಹಾಗೆ ನೋಡಿದರೆ, ಐಹೊಳೆ ಪಟ್ಟದಕಲ್ಲುಗಳು ಭಾರತೀಯ ವಾಸ್ತುಶಿಲ್ಪದ 'ಕಾರ್ಯಾಗಾರ'ಗಳೆಂದು ಪ್ರಸಿದ್ಧವಾಗಿವೆ. ಅಲ್ಲಿನ ದೇವಾಲಯಗಳ, ಶಿಲ್ಪಗಳ ಜೀವಂತಿಕೆ ಸಮೃದ್ಧ ಸಾಮಾಜಿಕ ಜೀವನದ ಲವಲವಿಕೆ ಉತ್ಸಾಹಗಳ ಸಂಕೇತವಾಗಿದೆ. ರಾಯಚೂರು ಜಿಲ್ಲೆಯ ಇಟ್ಟಿಗೆ ಮಹದೇವ ದೇವಾಲಯವನ್ನು ಶಾಸನಗಳು 'ದೇವಾಲಯಗಳ ಚಕ್ರವರ್ತಿ' ಎಂದು ವರ್ಣಿಸಿವೆ. ಉತ್ತರ ಕರ್ನಾಟಕದ ಸಾಮಾನ್ಯ ಚಿಕ್ಕ ಹಳ್ಳಿ ಹಳ್ಳಿಗಳಲ್ಲಿ ಚಾಲುಕ್ಯರ ಕಾಲದ ಸಾವಿರಾರು ಸುಂದರ ದೇವಾಲಯಗಳನ್ನು ಕಾಣಬಹುದು.

ಗೊಮ್ಮಟ ವಿಗ್ರಹ

ಹತ್ತನೆಯ ಶತಮಾನದ ಗಂಗರ ಕಾಲದ ಗೊಮ್ಮಟ ವಿಗ್ರಹದ ಜೊತೆ ಗಾತ್ರ, ಭಾವ, ಔನ್ನತ್ಯ, ಉದಾತ್ತತೆಗಳ ದೃಷ್ಟಿಯಿಂದ ಹೋಲಿಸಲು ಇಡೀ ವಿಶ್ವದಲ್ಲಿ ಮತ್ತೊಂದು ವಿಗ್ರಹ ದೊರಕಲಾರದು. ಕರ್ನಾಟಕವು ಸಂಸ್ಕೃತಿ, ಶೌರ್ಯ, ಸಾಹಸ, ತ್ಯಾಗ, ಸ್ವಾಭಿಮಾನಗಳ ತನ್ನ ಅದ್ಭುತ ಸಂಕೇತದಂತೆ ಆ ವಿಗ್ರಹವನ್ನು ರೂಪಿಸಿದೆ. ಗೊಮ್ಮಟ ವಾಸ್ತವವಾಗಿ ಬಾಹುಬಲಿ ಎಂಬ ರಾಜಕುಮಾರ. ಬಾಹುಬಲಿ ಭರತ ಚಕ್ರವರ್ತಿಯ ತಮ್ಮ. ಭರತನು ಇಡೀ ವಿಶ್ವವನ್ನು ಗೆದ್ದು, ತಮ್ಮನಾದ ಬಾಹುಬಲಿಯೂ ತನಗೆ ಅಡಿಯಾಳಾಗಬೇಕೆಂದು ಬಯಸುತ್ತಾನೆ. ತನ್ನ ತಂದೆಯಿಂದ ಬಂದ ರಾಜ್ಯವನ್ನು ತನ್ನಷ್ಟಕ್ಕೆ ತಾನು ಆಳಿಕೊಂಡಿದ್ದ ಬಾಹುಬಲಿಗೆ ತನ್ನ ಅಣ್ಣನ ಅಡಿಯಾಳಾಗಿ ಇರಲು ಬಯಕೆ ಬರಲಿಲ್ಲ. ಕಾಲು ಕೆರೆದು ಯುದ್ಧಕ್ಕೆ ಬಂದ ಭರತನನ್ನು ಆ ಸ್ವಾಭಿಮಾನಿ ಸುಲಭವಾಗಿ ಸೋಲಿಸಿ ವಿಜಯಿಯಾಗುತ್ತಾನೆ. ಆ ವಿಜಯದ ತುತ್ತ ತುದಿಯಲ್ಲಿಯೇ ಅವನಿಗೆ ವೈರಾಗ್ಯೋದಯವಾಗಿ ಅಣ್ಣನಿಂದ ಗೆದ್ದುಕೊಂಡಿದ್ದ ಇಡೀ ಭೂಪ್ರದೇಶವನ್ನು ಅಣ್ಣನಿಗೇ ಒಪ್ಪಿಸಿ, ತಾನು

CC-O. Vidyabharathi Book Centre, Sringeri

CC-O. In Public Domain. Digitized by eGangotri

ಸನ್ಯಾಸಿಯಾಗುತ್ತಾನೆ; ತ್ಯಾಗಗುಣದ ಪರಾಕಾಷ್ಠೆಯನ್ನು ಮೆರೆಯುತ್ತಾನೆ. ಬಾಹುಬಲಿಯೇ ಗೊಮ್ಮಟಸ್ವಾಮಿ. ಕನ್ನಡಿಗರ ರಕ್ತದಲ್ಲಿ ತ್ಯಾಗ, ಅಧ್ಯಾತ್ಮ ಇವೆಯಾದರೂ ಅವು ಹೇಡಿತನದಿಂದ ಬಂದುವಲ್ಲ; ಪೌರುಷ ಆತ್ಮಾಭಿಮಾನದಿಂದ ಬಂದಂಥವು. ಪೌರುಷ, ಸ್ವಾಭಿಮಾನ, ಅದ್ಭುತ ಸಾಹಸ, ಔದಾರ್ಯ, ಕ್ಷಮೆ, ತ್ಯಾಗಗುಣಗಳು ಬಾಹುಬಲಿಯ ಅಥವಾ ಗೊಮ್ಮಟನ ಗುಣಗಳಾಗಿರುವಂತೆ ಕರ್ನಾಟಕ ಸಂಸ್ಕೃತಿಯ ಗುಣಗಳೂ ಆಗಿವೆ.

ಬೇಲೂರು, ಹಳೇಬೀಡು, ಸೋಮನಾಥ ದೇವಾಲಯಗಳು ಕಲ್ಲಿನ ಸೂಕ್ಷ್ಮ ಕುಸುರಿ ಕೆಲಸಕ್ಕೆ ಖ್ಯಾತವಾಗಿವೆ. ನಯಗಾರಿಕೆಯ ಶಿಲ್ಪಚಾತುರ್ಯಕ್ಕೆ ಅವುಗಳ ಜೊತೆ ವಿಶ್ವದ ಯಾವುದೇ ಶಿಲ್ಪಗಳು ಸಾಟಿಯಲ್ಲ. ಕರ್ನಾಟಕ ಸೌಂದರ್ಯದ ಬೀಡು; ಶೂರರ ತವರುಮನೆ; ಶ್ರೇಷ್ಠ ಸಾಹಿತ್ಯದ ನೆಲೆವೀಡು; ಕಣ್ಮನಗಳನ್ನು ಆಹ್ಲಾದಗೊಳಿಸಿ, ಮನುಷ್ಯನನ್ನು ಆದರ್ಶಗಳ ಔನ್ನತ್ಯಕ್ಕೆ ಎತ್ತುವ ಕಲೆಗಳ ಆಗರ. ವಿಶ್ವದ ಶ್ರೇಷ್ಠ ಸಂಸ್ಕೃತಿಗಳ ಅಗ್ರಪಂಕ್ತಿಯಲ್ಲಿ ಕರ್ನಾಟಕಕ್ಕೆ ಪ್ರಮುಖ ಸ್ಥಾನವಿದೆ.

ಧರ್ಮ ಸಮನ್ವಯ

ಕರ್ನಾಟಕ ಸಂಸ್ಕೃತಿಯು ತನ್ನ ಬದುಕು, ಸಾಹಿತ್ಯ ಕಲೆ ಇವುಗಳಲ್ಲಿ ಸಮನ್ವಯವನ್ನು ಸಾಧಿಸಿರುವುದನ್ನು ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ಈ ಸಮನ್ವಯವು ಸಂಸ್ಕೃತಿಯ ಇತರ ಶಾಖೆಗಳಲ್ಲಿ ಹೇಗೋ ಅಂತೆಯೇ ಇನ್ನೊಂದು ಪ್ರಮುಖ ಶಾಖೆಯಾದ ಧರ್ಮದಲ್ಲಿಯೂ ಕಾಣಿಸಿಕೊಂಡ ಪರಿಯೂ ಗಮನಾರ್ಹವಾಗಿದೆ. ಕರ್ನಾಟಕ ಹಲವು ವಿಭಿನ್ನ ಧರ್ಮಗಳ, ವಿಭಿನ್ನ ಆಲೋಚನೆಗಳ ನಾಡು; ಸಂತರ ನಾಡು. ಒಂದು ಶಾಸನವು ಕರ್ನಾಟಕವನ್ನು ''ಸರ್ವಧರ್ಮ ಧೇನುನಿವಹಕ್ಕಾಡುಂಬೊಲಂ'' ಎಂದು ವರ್ಣಿಸಿದೆ. ಅದು ಎಲ್ಲ ಧರ್ಮಗಳಿಂಬ ಹಸುಗಳು ಆಡುವ ಬಯಲು ಪ್ರದೇಶ ಎಂದು ಕರ್ನಾಟಕವನ್ನು ವರ್ಣಿಸಿರುವುದು ಉಚಿತವಾಗಿದೆ. ಕ್ರಿ.ಪೂ. ಮೂರನೇ ಶತಮಾನದಲ್ಲಿ ಬಂದ ಬೌದ್ಧ ಧರ್ಮದಿಂದ ಏನಿಲ್ಲವೆಂದರೂ ಪರೋಕ್ಷವಾಗಿಯಾದರೂ ಹನ್ನೆರಡನೆಯ ಶತಮಾನದ ಬೆಡಗಿನ ವಚನಗಳು ರೂಪುಗೊಂಡವು. ಕ್ರಿ.ಪೂ. ಎರಡನೇ ಶತಮಾನದಲ್ಲಿ ಕರ್ನಾಟಕಕ್ಕೆ ಬಂದ ಜೈನಧರ್ಮವಂತೂ ಕರ್ನಾಟಕ ಸಂಸ್ಕೃತಿಗೆ ತನ್ನ ಸಾಹಿತ್ಯ,

Sri Vidyabharathi Book Centre, Sringeri

CC-O. In Public Domain. Digitized by eGangotri

ಬೌದ್ಧಿಕಶಾಸ್ತ್ರಸಾಹಿತ್ಯ, ಶಿಲ್ಪವಾಸ್ತುಗಳಿಗೆ ಅಪೂರ್ವ ಕೊಡುಗೆಗಳನ್ನು ಕೊಟ್ಟಿತು. ವೀರಶೈವ ಧರ್ಮವು ವಚನ ಸಾಹಿತ್ಯದ ಮೂಲಕ ಕನ್ನಡವನ್ನು ಶ್ರೀಮಂತಗೊಳಿಸಿತು. ವಿಷ್ಣುವರ್ಧನನ ಕಾಲದಲ್ಲಿ ಕರ್ನಾಟಕಕ್ಕೆ ಬಂದ ಶ್ರೀವೈಷ್ಣವ ಮತವು ಹಲವು ಸುಂದರ ದೇವಾಲಯಗಳಿಗೆ ಸ್ಫೂರ್ತಿಯನ್ನು ನೀಡಿತು. ಬೌದ್ಧ, ಜೈನ, ಶೈವ, ವೈಷ್ಣವ ಮತಗಳಲ್ಲದೆ ಇನ್ನೂ ಹಲವಾರು ಪಂಥಗಳು ಜಾತಿಗಳು ಕರ್ನಾಟಕದಲ್ಲಿ ಶಾಂತಿ ಸೌಹಾರ್ದಗಳಿಂದ ಬಾಳಿದುವು.

ರಾಜ ಮನೆತನಗಳು: ಎಲ್ಲ ಧರ್ಮಗಳಿಗೆ ಪ್ರೋತ್ಸಾಹ

ಕರ್ನಾಟಕದ ದೊರೆಗಳು ಉದಾರ ಹೃದಯಿಗಳಾಗಿದ್ದು ಎಲ್ಲ ಧರ್ಮಗಳಿಗೂ ಸಮಾನ ಪ್ರೋತ್ಸಾಹವನ್ನು ನೀಡಿದರು. ಬಾದಾಮಿ ದೊರೆಗಳು ವೈಷ್ಣವರಾಗಿದ್ದರೂ, ಐಹೊಳೆ ಮಹಾಕೂಟ ಶಾಸನಗಳನ್ನು ನೋಡಿದರೆ ಜೈನ, ಶೈವ ದೇವಾಲಯಗಳಿಗೂ ದತ್ತಿಗಳನ್ನು ನೀಡಿರುವುದು ಕಂಡುಬರುತ್ತದೆ. ಕನ್ನಡಿಗರಾದ ರಾಷ್ಟ್ರಕೂಟ ದೊರೆಗಳು ಎಲ್ಲೋರ ದೇವಾಲಯಗಳನ್ನೂ, ಬೊಂಬಾಯಿ ಸಮೀಪದ ಎಲಿಫೆಂಟಾ ಗುಹಾಂತರ್ದೇವಾಲಯಗಳನ್ನೂ ಕೊರೆಯಿಸಿದರು. ರಾಷ್ಟ್ರಕೂಟ ಚಕ್ರವರ್ತಿ ಕೃಷ್ಣನು ಕೊರೆಸಿದ ಎಲ್ಲೋರದ ಕೈಲಾಸ ದೇವಾಲಯವು ವಿಶ್ವದ ಅದ್ಭುತಗಳಲ್ಲಿ ಒಂದು. ಆದರೂ ಆ ದೊರೆಗಳು ಇತರ ಧರ್ಮೀಯರಿಗೆ ಸಾಕಷ್ಟು ಪ್ರೋತ್ಸಾಹವನ್ನು ಕೊಟ್ಟರು. ತನ್ನ ರಾಜ್ಯಕ್ಕೆ ಸಂಕಷ್ಟ ಬಂದಾಗ ಕೊಲ್ಲಾಪುರದ ಲಕ್ಷ್ಮಿಗೆ ತನ್ನ ಕೈ ಬೆರಳನ್ನೇ ಕೊಡಲು ಮುಂದಾದ ನೃಪತುಂಗ ಚಕ್ರವರ್ತಿಯು ಸಂಸ್ಕೃತದಲ್ಲಿ 'ಪ್ರಶ್ನೋತ್ತರ ರತ್ನಮಾಲಿಕಾ' ಎಂಬ ಜೈನಪರ ಕೃತಿಯನ್ನು ರಚಿಸಿದ್ದಾನೆ. ಗಂಗರ ವೈಯಕ್ತಿಕ ಮತ ಜೈನ ಆಗಿದ್ದರೂ ಹಲವಾರು ಸುಂದರ ಹಿಂದೂ ದೇವಾಲಯಗಳನ್ನು ನಿರ್ಮಿಸಿದರು. ಹೊಯ್ಸಳರಿಗೆ ಶಿವನಿಗೂ ವಿಷ್ಣುವಿಗೂ ಭೇದವೆ ಕಾಣಿಸಲಿಲ್ಲ. ಅವರ ಹಲವಾರು ಶಾಸನಗಳಲ್ಲಿ 'ಕೇಶವಾಯ ಶಿವಾಯ ಚ' ಎಂದಿದೆ (ಕೇಶವನಿಗೂ ಶಿವನಿಗೂ ಇಬ್ಬರಿಗೂ ನಮಸ್ಕಾರ). ವಿಷ್ಣುವರ್ಧನನು ವೈಷ್ಣವನಾದರೂ ಅವನ ಪತ್ನಿ ಶಾಂತಲೆ ಜೈನಳಾಗಿದ್ದಳು. ಶಾಂತಲೆಯ ತಂದೆ ಶೈವನಾಗಿದ್ದ. ಅವಳು ಹುಟ್ಟಿದ್ದೇ ಧರ್ಮೇಶ್ವರ ದೇವರ ವರಪ್ರಸಾದದಿಂದ. ಹೊಯ್ಸಳರ ಕಾಲದ ಒಂದು ಶಾಸನ ಹೀಗೆ ಹೇಳುತ್ತದೆ: ''ಯಂ ಶೈವಾಃ ಸಮುಪಾಸತೇ ಶಿವ ಇತಿ, ಬ್ರಹ್ಮೇತಿ ವೇದಾಂತಿನಃ, ಬೌದ್ಧಾಃ ಬುದ್ಧ ಇತಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಮಾಣ ಪಟವಃ ಕರ್ತ ಇತಿ ನೈಯಾಯಿಕಾಃ, ಅರ್ಹನ್ ಇತ್ಯಥ ಜೈನ ಶಾಸನ ರತಾಃ, ಕರ್ಮ ಇತಿ ಮೀಮಾಂಸಕಾಃ, ಸೋಯಂ ವೋ ವಿದಧಾತು ವಾಂಛಿತಫಲಂ ತ್ರೈಲೋಕನಾಥೋ ಹರಿಃ''. ಶೈವರು ಶಿವನೆಂದೂ ವೇದಾಂತಿಗಳು ಬ್ರಹ್ಮ ಎಂದೂ ಬೌದ್ಧರು ಬುದ್ಧ ಎಂದೂ ನೈಯಾಯಿಕರು ಕರ್ತ ಎಂದೂ ಜೈನರು ಅರ್ಹತ್ ಎಂದೂ ಕರೆಯುವುದು ಆ ಒಂದು ದೈವವಾದ ಹರಿಯನ್ನೇ ಎಂದು ಶಾಸನದ ಅರ್ಥ. ವಿಜಯನಗರದ ದೊರೆಗಳು ಮೇಲಿನ ಧರ್ಮಗಳನ್ನಲ್ಲದೆ, ಇಸ್ಲಾಮಿನ ಕೊರಾನನ್ನೂ ಗೌರವಿಸಿ ಆ ಧರ್ಮಕ್ಕೂ ಗೌರವವನ್ನು ಸಲ್ಲಿಸಿದರು.

ಕವಿಗಳು - ಸಂತರು

ಕನ್ನಡ ಕವಿಗಳೂ ಸಂತರೂ ಮನುಷ್ಯ ವರ್ಗದ ಸಮಾನತೆಯನ್ನೂ, ಮನುಷ್ಯ ಮನುಷ್ಯರ ಮಧ್ಯೆ ಇರಬೇಕಾದ ಪರಸ್ಪರ ಸೌಹಾರ್ದ ಸ್ನೇಹ ಬಾಂಧವ್ಯ ಗುಣಗಳನ್ನೂ, ತಮ್ಮ ಕೃತಿಗಳಲ್ಲಿ ಹಾಡಿ ಹೊಗಳಿದ್ದಾರೆ. ತಮ್ಮ ಬದುಕಿನಲ್ಲಿ ಬಾಳಿ ತೋರಿಸಿಕೊಟ್ಟಿದ್ದಾರೆ. ಕವಿರಾಜಮಾರ್ಗದಲ್ಲಿ ಒಂದು ಬಹು ದೊಡ್ಡ ಮಾತು ಇದೆ: ''ಕಸವರಮ್ ಎಂಬುದು ನೆರೆ ಸೈರಿಸಲ್ ಆರ್ಪೊಡೆ ಪರವಿಚಾರಮುಮಂ ಪರಧರ್ಮಮುಮಂ''. ಅನ್ಯರ ವಿಚಾರಗಳನ್ನೂ ಅನ್ಯರ ಧರ್ಮವನ್ನೂ ಸಹನೆಯಿಂದ ನೋಡುವುದೇ ನಿಜವಾದ ಐಶ್ವರ್ಯ. ಕನ್ನಡದ ಈಗಿನ ಮೊದಲ ಉಪಲಬ್ಧ ಕೃತಿಯಲ್ಲಿ ಕಂಡುಬರುವ ಈ ಮಾತುಗಳು ಕರ್ನಾಟಕ ಸಂಸ್ಕೃತಿಯು ಇಟ್ಟುಕೊಂಡಿದ್ದ ಮೇಲ್ಪಂಕ್ತಿಯ ಆದರ್ಶವೂ ಆಗಿದೆ. ಇದು ಕನ್ನಡ ಸಂಸ್ಕೃತಿಯ ಸಮನ್ವಯ ಗುಣ. ನೃಪತುಂಗ (ಅಥವಾ ಶ್ರೀವಿಜಯ) ಕನ್ನಡ ಜನರನ್ನು ವರ್ಣಿಸುವಾಗ, ಅವರು ''ಸುಭಟರೂ ಕವಿಗಳೂ ಚೆಲುವರೂ ಗುಣಿಗಳೂ ಅಭಿಮಾನಿಗಳೂ, ಅತ್ಯುಗ್ರರೂ ಗಂಭೀರಚಿತ್ತರೂ ವಿವೇಕಿಗಳೂ'' ಆಗಿದ್ದರೆಂದು ಹೇಳುತ್ತಾನೆ. ಈ ಮಾತುಗಳು ಸ್ವಾಭಿಮಾನ ಮತ್ತು ಸಮದೃಷ್ಟಿಗಳು ಅವರ ಪ್ರಮುಖ-ಲಕ್ಷಣವಾಗಿದ್ದುವೆಂಬುದನ್ನು ಹೇಳುತ್ತವೆ. ''ಮನುಷ್ಯ ಜಾತಿ ತಾನೊಂದೆ ವಲಂ'' ಎಂಬುದು ಆದಿಕವಿ ಪಂಪನ ಮಾತು. ಅದೇ ಪಂಪನ ಪ್ರಕಾರ ತ್ಯಾಗ, ಭೋಗ, ಗೇಯ (ಸಂಗೀತ), ಗೋಷ್ಠಿ, ವಿದ್ವತ್ತುಗಳಿಂದ ಹದಗೊಂಡ ಬಾಳನ್ನು ಬಾಳುವವನೇ ನಿಜವಾದ ಮನುಷ್ಯ. ಯುದ್ಧದಲ್ಲಿ ಶೌರ್ಯವನ್ನು ತೋರಬೇಕು;

Sri Vidyabharathi Book Centre, Sringeri

CC-O. In Public Domain. Digitized by eGangotri

ತನ್ನ ಬಳಿ ಇರುವ ಐಶ್ವರ್ಯವನ್ನು ಬಡವರಿಗೆ ದಾನ ಮಾಡಬೇಕು. ಈ ಶೌರ್ಯ, ತ್ಯಾಗ ಗುಣಗಳನ್ನು ಅವನು ತನ್ನ ಕೃತಿಯಲ್ಲಿ ಎತ್ತಿ ಹಿಡಿದಿದ್ದಾನೆ. ''ದೇವನೊಬ್ಬ ನಾಮ ಹಲವು'' ಎಂದು ಬಸವಣ್ಣ ಸಾರಿದರು. ಸುಳ್ಳು ಹೇಳುವವನು ನಿಜವಾದ ಹೊಲೆಯನೇ ಹೊರತು ಹುಟ್ಟಿನಿಂದ ಹೊಲೆತನ ಬರುವುದಿಲ್ಲವೆಂದು ರಾಘವಾಂಕ ಕವಿ ಸಾರಿದರೆ, ಹರಿಹರ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಚೋಳ ಚಕ್ರವರ್ತಿಯು ಹೊಲೆಯ ಶಿವಭಕ್ತ ಮಾದಾರ ಚನ್ನಯ್ಯನ ಪಾದಗಳಿಗೆ ಎರಗುವಂತೆ ಮಾಡಿದ. ಮನುಷ್ಯ ವರ್ಗವೆಲ್ಲ ಒಂದು ಎಂಬ ತತ್ವವನ್ನು ತಮ್ಮ ತಮ್ಮ ಧರ್ಮದ ಚೌಕಟ್ಟಿನಲ್ಲೇ ಕನ್ನಡ ಜನ ಕಂಡಿದ್ದಾರೆ. ಕನಕದಾಸರು ತಮ್ಮ ರಾಮಧಾನ್ಯ ಚರಿತ್ರೆಯಲ್ಲಿ ಬತ್ತ-ರಾಗಿ ಇವುಗಳ ಸಂಘರ್ಷವನ್ನು ಚಿತ್ರಿಸಿದ್ದಾರೆ. ಅಂತ್ಯದಲ್ಲಿ ಬಡಜನರ ಆಹಾರವಾದ ರಾಗಿ, ಶ್ರೀಮಂತರ ಉನ್ನತ ಕುಲದವರ ಆಹಾರವಾದ ಬತ್ತಕ್ಕಿಂತ ಶ್ರೇಷ್ಠ ಎಂಬ ಪ್ರಶಸ್ತಿಯನ್ನು ಶ್ರೀರಾಮನಿಂದ ಕೊಡಿಸಿದ್ದಾರೆ. ಬತ್ತಕ್ಕಿಂತ ರಾಗಿ ಶ್ರೇಷ್ಠವೆಂಬ ಈ ಕತೆ ಸಾಂಕೇತಿಕವೆಂದು ಯಾರು ಬೇಕಾದರೂ ಗುರುತಿಸಬಹುದು. ದಯೆಯೇ ಧರ್ಮದ ಮೂಲವೆಂದು ಬಸವಣ್ಣ ಹೇಳಿದರೆ; ಹೊಲೆಯ ಊರ ಹೊರಗಿಲ್ಲ, ಒಳಗೂ ಇರಲು ಸಾಧ್ಯವೆಂದು ಪುರಂದರದಾಸರು ಪ್ರತಿಪಾದಿಸಿ, ಸುಳ್ಳು ಹೇಳುವವ ಹೊಲೆಯ, ವಂಚನೆ ಮಾಡುವವ ಹೊಲೆಯ, ದಾರಿಗೆ ಮುಳ್ಳು ಹಚ್ಚುವವ ಹೊಲೆಯ ಇತ್ಯಾದಿ ಮಾತುಗಳ ಮೂಲಕ ಹೊಲೆತನಕ್ಕೆ ಬೇರೊಂದು ವ್ಯಾಖ್ಯಾನವನ್ನು ಕೊಟ್ಟರು.

ಬುಕ್ಕನ ಶಾಸನ

ಕ್ರಿ.ಶ. 1368ರ ಬುಕ್ಕರಾಯನ ಶ್ರವಣಬೆಳ್ಗೊಳದ ಶಾಸನವನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸುವುದು ಅಗತ್ಯ. ಬುಕ್ಕ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಹಕ್ಕ ಬುಕ್ಕ ಸೋದರರಲ್ಲಿ ಕಿರಿಯವನು. ಇಡೀ ದಕ್ಷಿಣ ಭಾರತವನ್ನು ಇಸ್ಲಾಮ್ ವ್ಯಾಪಿಸಿ ಭಾರತೀಯ ಸಂಸ್ಕೃತಿಯು ನಾಶಕ್ಕೆ ಒಳಗಾಗುವ ಸ್ಥಿತಿಯಲ್ಲಿದ್ದಾಗ ಕ್ರಿ.ಶ. 1336ರಲ್ಲಿ ವಿಜಯನಗರ ಸಾಮ್ರಾಜ್ಯವು ಸನಾತನ ಸಂಸ್ಕೃತಿಯ ಸಂರಕ್ಷಣೆಗಾಗಿ ಉದಯವಾಯಿತು. ಹದಿನಾಲ್ಕನೇ ಶತಮಾನದಲ್ಲಿ ನಾಶವಾಗಲಿದ್ದ ಭಾರತೀಯ ಸಂಸ್ಕೃತಿಯ ರಕ್ಷಣೆಯನ್ನು ಮಾಡಿದ್ದು ಕರ್ನಾಟಕದ ಹಕ್ಕ-ಬುಕ್ಕರು. ಬುಕ್ಕನ ಕಾಲದಲ್ಲಿ ಶ್ರೀವೈಷ್ಣವರಿಗೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಜೈನರಿಗೂ ಮತೀಯ ಘರ್ಷಣೆಗಳು ನಡೆದು, ಜೈನರು ಬುಕ್ಕ ದೊರೆಗೆ ಅಹವಾಲು ಹೇಳಿಕೊಳ್ಳುತ್ತಾರೆ. ಬುಕ್ಕನು ಜೈನ ಮತ್ತು ಶ್ರೀವೈಷ್ಣವ ಧಾರ್ಮಿಕ ನಾಯಕರೆಲ್ಲರನ್ನೂ ಕರೆಸಿಕೊಂಡು ಒಬ್ಬರ ಕೈಯಲ್ಲಿ ಇನ್ನೊಬ್ಬರ ಕೈಯಿಟ್ಟು, ''ಜೈನಧರ್ಮಕ್ಕೂ ವೈಷ್ಣವ ಧರ್ಮಕ್ಕೂ ಭೇದವಿಲ್ಲ. ಎರಡೂ ಒಂದೇ. ಒಂದು ಧರ್ಮದ ಹೆಗ್ಗಳಿಕೆ ಅವನತಿಗಳು ಇನ್ನೊಂದು ಧರ್ಮದ ಹೆಗ್ಗಳಿಕೆ, ಅವನತಿಗಳೂ ಹೌದು'' ಎಂದು ತೀರ್ಪು ಕೊಡುತ್ತಾನೆ. ಈ ರೀತಿ ಪರಸ್ಪರ ಧಾರ್ಮಿಕ ಸೌಹಾರ್ದ, ಭ್ರಾತೃತ್ವಗಳನ್ನು ಸಾರಿದ ಮಹನೀಯ ಬುಕ್ಕನ ಶಾಸನವು ಒಂದು ಪವಿತ್ರ ಹಾಗೂ ಹೆಮ್ಮೆಯ ದಾಖಲೆ. ಆ ಶಾಸನದ ಮೂಲ ಪಾಠವು ಮಾಗಡಿ ತಾಲ್ಲೂಕಿನ ಕಲ್ಕದಲ್ಲಿದೆ.

ಒಂದು ಧರ್ಮದ ಅತ್ಯುತ್ಸಾಹಿಗಳು ಮಾಡಿದ ಅಕೃತ್ಯವನ್ನು ಆ ಧರ್ಮದ ಮುಖಂಡರೇ ಮುಂದೆ ನಿಂತು ತಿದ್ದಿದ ಒಂದು ಉದಾಹರಣೆಯಿದೆ. ಹಳೇಬೀಡಿನ ಹುಚ್ಚಪ್ಪ ದೇವರು ಎಂಬ ವೀರಶೈವ ಅಲ್ಲಿನ ವಿಜಯ ಪಾರ್ಶ್ವನಾಥ ಬಸದಿಗೆ ಲಿಂಗಮುದ್ರೆ ಹಾಕಿ ಅದು ತಮಗೆ ಸೇರಿದ್ದೆಂದು ಸವಾಲು ಹಾಕುತ್ತಾನೆ. ಆಗ ಜೈನರು, ವೀರಶೈವ ಗುರುಗಳಿಗೆ ಹೇಳಿಕೊಂಡಾಗ ಎಲ್ಲ ಮಠಗಳ ಮಹತ್ತುಗಳೂ ಸೇರಿಕೊಂಡು ಬಸದಿಯನ್ನು ಪರಿಶೀಲಿಸಿ, ಅದು ಜೈನರದೆಂದೂ ಜೈನರ ಧಾರ್ಮಿಕ ಕಟ್ಟಣೆಗಳಿಗೆ ಅಡ್ಡಿ ಬಂದವರು ನಿಜವಾದ ಶಿವಭಕ್ತರಲ್ಲವೆಂದೂ, ಅವರನ್ನು ಶಿವದ್ರೋಹಿ ಧರ್ಮದ್ರೋಹಿಗಳೆಂದು ಭಾವಿಸಿ ಧರ್ಮದಿಂದ ಹೊರಹಾಕುವುದಾಗಿಯೂ ಹೇಳುತ್ತಾರೆ. ಕರ್ನಾಟಕ ಸಂಸ್ಕೃತಿಯಲ್ಲಿ ಧಾರ್ಮಿಕ ಅಸಹಿಷ್ಣುತೆ ವಿರಳ; ಇಲ್ಲಿ ನಿಯಮವೆಂದರೆ ಧಾರ್ಮಿಕ ಸಹನೆ. ಕೆಲವು ತಿಕ್ಕಾಟಗಳು ನಡೆದಿವೆ; ಆದರೆ ಅವು ಅಪವಾದಗಳು ಮಾತ್ರ. ಕರ್ನಾಟಕ ಸಂಸ್ಕೃತಿ ತನ್ನ ಎರಡು ಸಾವಿರ ವರ್ಷಗಳ ಚರಿತ್ರೆಯಲ್ಲಿ ವಿಶ್ವಕ್ಕೆ ತೋರಿಸಿರುವ ಮೌಲ್ಯವೆಂದರೆ-ಧಾರ್ಮಿಕ ಸಮನ್ವಯ.

ಕನ್ನಡ ಕವಿಗಳ ನಾಡ ನುಡಿ ಪ್ರೇಮ

ಕನ್ನಡದ ಕವಿಗಳು ನಾಡನ್ನು ಆಳವಾಗಿ ಪ್ರೀತಿಸಿದರು; ತಮ್ಮ ನುಡಿಯ ಜೊತೆ ಗಾಢವಾಗಿ ಸ್ಪಂದಿಸಿದರು. ನೃಪತುಂಗನಿಗೆ ಕರ್ನಾಟಕವು ಇಡೀ ವಿಶ್ವದಲ್ಲಿ ಒಂದು ಸವಿಶೇಷ 'ವಿಷಯ ವಿಶೇಷ' (ಪ್ರದೇಶ) ಚಾಲುಕ್ಯರಿಗಂತೂ ತಮ್ಮನ್ನು 'ಕರ್ನಾಟ'ರು ಎಂದು ಕರೆದುಕೊಳ್ಳಲು ಹೆಮ್ಮೆ. ಪಂಪನಿಗೆ ಹುಟ್ಟು

CC-O. Vasanthakumari Book Centre, Shimoga

CC-O. In Public Domain. Digitized by eGangotri

ನಾಡಾದ ಬನವಾಸಿಯ ಬಗ್ಗೆ ಅಪರಿಮಿತ ಮಮತೆ. ಅಲ್ಲಿಯ ಸೌಂದರ್ಯ, ಹೃದಯವಂತಿಕೆ, ಸುಸಂಸ್ಕೃತ ಜೀವನಗಳು ಅವನನ್ನು ತೀವ್ರವಾಗಿ ಆಕರ್ಷಿಸಿದ್ದವು. ''ನನ್ನ ಮನಸ್ಸಿಗೆ ಅಂಕುಶ ಹಾಕಿದರೂ ಅದು ನಿಲ್ಲದೆ ಬನವಾಸಿಯ ಕಡೆ ಓಡುತ್ತದೆ. ಅದನ್ನು ನೆನೆಯುತ್ತದೆ'' (''ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ'') ಎಂದಿದ್ದಾನೆ. ''ಸಂಸ್ಕೃತಿ ಸಂಪನ್ನ ಮನುಷ್ಯನಾಗಿ ಹುಟ್ಟಿದರೆ ಬನವಾಸಿ ದೇಶದಲ್ಲೇ ಹುಟ್ಟಬೇಕು; ಒಂದು ವೇಳೆ ಆಗದಿದ್ದರೆ ಅಲ್ಲಿ ಕೊನೆಯ ಪಕ್ಷ ಕೋಗಿಲೆಯಾಗಿಯಾದರೂ ಮರಿ ದುಂಬಿಯಾಗಿಯಾದರೂ ಹುಟ್ಟಬೇಕು''. (' ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್') ಈ ಉದ್ಗಾರಗಳನ್ನು ಗಮನಿಸಿದರೆ ಪಂಪನ ತುಡಿತ ಅರ್ಥವಾಗುತ್ತದೆ. 13ನೇ ಶತಮಾನದ ಆಂಡಯ್ಯ ಅಚ್ಚಗನ್ನಡದ ಅಭಿಮಾನಿ; ಸಂಸ್ಕೃತದ ಸಹಾಯವಿಲ್ಲದೆಯೇ ಕಾವ್ಯವನ್ನು ಬರೆಯುತ್ತೇನೆಂದು ಸಂಕಲ್ಪಿಸಿ, ಅಚ್ಚಗನ್ನಡದಲ್ಲೇ ತನ್ನ 'ಕಬ್ಬಿಗರ ಕಾವ' ಎಂಬ ಕಾವ್ಯವನ್ನು ಬರೆದ ವಿಶಿಷ್ಟ ಕವಿ. ''ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು'' ಎಂಬ ವಾಕ್ಯದಲ್ಲಿ ತನ್ನೆಲ್ಲ ನಾಡಪ್ರೇಮವನ್ನು ಹಿಡಿದಿಟ್ಟಿದ್ದಾನೆ. 17ನೇ ಶತಮಾನದ ಗೋವಿಂದ ವೈದ್ಯ ತನ್ನ 'ಕಂಠೀರವ ನರಸಿಂಹರಾಜ ವಿಜಯ' ದಲ್ಲಿ ಕನ್ನಡ ನಾಡನ್ನು ಅಷ್ಟೇ ಭಾವುಕವಾಗಿ ಕೊಂಡಾಡಿದ್ದಾನೆ. ''ಜಾತಿಸಂಕರವಿಲ್ಲ ಜಡದೇಹಿಗಳಿಲ್ಲ ನೀತಿ ಹೀನರು ಚೋರರಿಲ್ಲ ಘಾತುಕರಿಲ್ಲ ದುರ್ಜನರಿಲ್ಲ ಕರ್ನಾಟಕ ರೀತಿಯನೆಂತು ಬಣ್ಣಿಪೆನು''. ನೃಪತುಂಗನನ್ನು ಅನುಸರಿಸಿದ ನಂಜುಂಡ ಕವಿಯು (16ನೇ ಶತಮಾನ) ''ಕಾವೇರಿಯಿಂದ ಗೋದಾವರಿಯವರೆಗಮಿರ್ದಾ ವಸುಧಾತಳವಳಯ ಭಾವಿಸೆ ಕರ್ನಾಟಕ ಜನಪದವನು ಅವನೊಲಿದು ಬಣ್ಣಿಪನು''. ಈ ಸುಂದರ ಕರ್ನಾಟಕದ ಚೆಲುವನ್ನು ಕವಿಗಳು ತಮ್ಮ ಕಾವ್ಯಗಳಲ್ಲಿ ಹಿಡಿದಿಡಲು ಯತ್ನಿಸಿದ್ದಾರೆ. ಹರಿಹರನಿಗೆ ಕರ್ನಾಟಕ, ಹಂಪೆ ಎಂದರೆ ತೀವ್ರ ಪ್ರೇಮ. ಅವನ ಪ್ರಕಾರ ಶಿವನ ತಪಸ್ಸು, ಕಾಮದಹನದ ಘಟನೆಗಳು ನಡೆದುದು ದೂರದ ಹಿಮಾಲಯದಲ್ಲಲ್ಲ; ಇಲ್ಲೇ ಹಂಪೆಯಲ್ಲಿ. ಜನ ಸಾಮಾನ್ಯರ ಭಾಷೆಯಾದ ಕನ್ನಡವನ್ನು ವಚನಗಳಿಗೆ ಬಳಸಿ ಅದನ್ನು ದೇವ ಭಾಷೆಯ ಮಟ್ಟಕ್ಕೆ ಏರಿಸಿದವರು ಬಸವಣ್ಣನವರು (ಈ ಮಾತು ಶ. ಶ.

Vidyaranya Sri Vidyaratna Pitham Trust Foundation, Sringeri

CC-O. In Public Domain. Digitized by eGangotri

ಬಸವನಾಳರದು), ಕನ್ನಡವು ಶೂದ್ರರ ಭಾಷೆಯಾದ ಕಾರಣ, ಅದು ಪೂಜಾಸಮಯದಲ್ಲಿ ಬಳಕೆಯಾಗಲು ಅನರ್ಹವೆಂಬ ಭಾವನೆ ವೈದಿಕರಲ್ಲಿ ದಟ್ಟವಾಗಿದ್ದ ಕಾಲದಲ್ಲಿ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ ಅವನ್ನು ಪೂಜಾಕಾಲದಲ್ಲೂ ಬಳಸಿದ ಕೀರ್ತಿ ಶ್ರೀಪಾದರಾಯರದು ಮತ್ತು ಮುಂದಿನ ಹರಿದಾಸರದು. ಸುಲಿದ ಬಾಳೆಯ ಹಣ್ಣಿನಂತೆ, ಸಿಬುರು ತೆಗೆದ ಕಬ್ಬಿನಂತೆ, ಕಾದು ತಂಪಾದ ಹಾಲಿನಂತೆ ಮಧುರವಾಗಿರುವ ಕನ್ನಡವಿರುವಾಗ ಸಂಸ್ಕೃತ ಏಕೆ ಎಂದು ತನ್ನ ಭಾಷಾ ಪ್ರೇಮವನ್ನು ಮೆರೆದ ಮಹಾಲಿಂಗರಂಗ ಕವಿಯನ್ನು ಮರೆಯಲು ಸಾಧ್ಯವೇ? ಹತ್ತನೆಯ ಶತಮಾನದ ರಾಷ್ಟ್ರಕೂಟ ಚಕ್ರವರ್ತಿ ಮೂರನೆಯ ಕೃಷ್ಣನು ಮಧ್ಯಪ್ರದೇಶವನ್ನು ಗೆದ್ದಾಗ ಅಲ್ಲಿ ಜೂರಾ ಎಂಬಲ್ಲಿ ಕನ್ನಡ ಶಾಸನವನ್ನು ಹಾಕಿಸಿ ತನ್ನ ಭಾಷಾ ಪ್ರೇಮವನ್ನು ಮೆರೆದಿದ್ದಾನೆ. ಗುಜರಾತಿನ ಚಾಲುಕ್ಯರು ಮೂಲತಃ ಕರ್ನಾಟಕದವರು. ಅವರು ಗುಜರಾತಿನಲ್ಲಿ ಹೊರಡಿಸಿದ ತಾಮ್ರಪಟಗಳಿಗೆ ಕನ್ನಡದಲ್ಲೇ ರುಜು ಹಾಕುತ್ತಿದ್ದರು. ನಮ್ಮ ಹಿಂದಿನ ಚಕ್ರವರ್ತಿಗಳಿಗೆ ಮತ್ತು ಕವಿಗಳಿಗೆ ಕೀಳರಿಮೆ ಇರಲಿಲ್ಲ. ಕರ್ನಾಟಕದ ಹೊರಗೆ ಹೋದರೂ ಅಲ್ಲಿ ತಾವು ಕನ್ನಡಿಗರು ಎಂಬ ಆತ್ಮಾಭಿಮಾನವನ್ನೇ ಮೆರೆದರು. ಇದು ವಾಸ್ತವ. ಇದು ಇತಿಹಾಸ. ನೈಜ ಚರಿತ್ರೆ. ಸ್ವಾಭಿಮಾನವಿಲ್ಲದ ವ್ಯಕ್ತಿ ಮಾತ್ರ ಇತರರನ್ನು ಅನುಕರಿಸುತ್ತಾನೆ. ವ್ಯಕ್ತಿತ್ವವಿಲ್ಲದ ವ್ಯಕ್ತಿ ಮಾತ್ರ ಗೋಸುಂಬೆಯಂತೆ ಬಣ್ಣ ಬದಲಾಯಿಸುತ್ತಾನೆ. ಹಿಂದಿನ ಕನ್ನಡ ಜನ ಗೋಸುಂಬೆಗಳಾಗಿರಲಿಲ್ಲ. ಅವರು ಸ್ವಾಭಿಮಾನಿಗಳೂ ಸಮನ್ವಯ ದೃಷ್ಟಿಯವರೂ ಆಗಿದ್ದು ವಿಶಿಷ್ಟವಾದ ಕರ್ನಾಟಕ ಸಂಸ್ಕೃತಿಯೊಂದನ್ನು ಬೆಳೆಸಲು ಸಮರ್ಥರಾದರು.

ಆಲೂರು ವೆಂಕಟರಾಯರ ಮಾತುಗಳು

1917ರಲ್ಲಿ 'ಕರ್ನಾಟಕ ಗತವೈಭವ' ಎಂಬ ಕೃತಿಯಲ್ಲಿ ಆಲೂರು ವೆಂಕಟರಾಯರು ಹೇಳುತ್ತಾರೆ: ''ನಮ್ಮ ಆಶಾವೃಕ್ಷವನ್ನು ಕೊಳೆಯಿಸಿಬಿಡುವಂಥ ಹುಳುಗಳನ್ನು ಕೊಲ್ಲಲು ಇತಿಹಾಸವೇ ಮದ್ದು''. ಅವರ ಕಾಲದಲ್ಲಿ ನೆರೆಯ ರಾಜ್ಯ ಮಹಾರಾಷ್ಟ್ರದಲ್ಲಿ ಮತ್ತು ದೂರದ ಬಂಗಾಳದಲ್ಲಿ ಜನತೆ ತಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆ ಪಟ್ಟುಕೊಳ್ಳಲು ಅವರು ಇತಿಹಾಸದ ಬಗ್ಗೆ ಅರಿವು ಹೊಂದಿದ್ದುದೇ ಕಾರಣವೆಂಬುದನ್ನು

Sri Vidyabharathi Book Centre, Sirsi (U.K.)

CC-O. In Public Domain. Digitized by eGangotri

ವೆಂಕಟರಾಯರು ಗುರುತಿಸಿದರು. ಅವರು ಹೇಳಿದ್ದರು: ''ತಮ್ಮ ದೇಶದೊಡನೆ ತಾದಾತ್ಮ್ಯ ಹೊಂದದ ಮುಖಂಡರಿರುವ ಪ್ರಾಂತವೆಂದರೆ ಕರ್ನಾಟಕ ಒಂದೇ''. ನೆರೆರಾಜ್ಯಗಳ ಜನತೆ ಮತ್ತು ಮುಖಂಡರು ತಮ್ಮ ಚರಿತ್ರೆಯ ಬಗ್ಗೆ ಹೆಮ್ಮೆಯುಳ್ಳವರಾಗಿದ್ದಾರೆ, ಮತ್ತು ಅವರ ಚರಿತ್ರೆಯನ್ನು ಉಜ್ವಲವಾಗಿ ವೈಭವಿಸಿಕೊಂಡು ಅದೇ ನಿಜವೆಂದು ನಂಬುತ್ತಿರುವಾಗ, ಕರ್ನಾಟಕದ ನಿಜವಾದ ಚರಿತ್ರೆ ಕನ್ನಡಿಗರಿಗೆ ಕತೆಯಂತೆ ಕಾದಂಬರಿಯಂತೆ ಕಾಣಿಸುವುದನ್ನು ಕಂಡ ಅವರು ಮನ ಕರಗಿ ಮಾತನಾಡಿದ್ದಾರೆ. ಅವರು ಸಾರಿ ಹೇಳಿದ್ದಾರೆ: ''ನಾವು ನಿಮ್ಮಲ್ಲಿ ಕಡ್ಡೀ ಕೊಟ್ಟು ಸಾರಿ ಹೇಳುವುದೇನೆಂದರೆ ನಮ್ಮ ಕರ್ನಾಟಕವು ಮೃತರಾಷ್ಟ್ರವಲ್ಲ. ಅದು ಜೀವಂತರಾಷ್ಟ್ರವು; ಅಷ್ಟೇಕೆ, ಅದೊಂದು ಪ್ರತಿಭಾಸಂಪನ್ನ ರಾಷ್ಟ್ರವು''. ಎಪ್ಪತ್ತು ವರ್ಷಗಳಿಗಿಂತ ಹಿಂದೆ ಆ ಕನ್ನಡನಾಡಿನ ಸುಪುತ್ರರು ಆಡಿದ ಮಾತು ಇಂದೂ ಪರಿಭಾವನೆಗೆ ಯೋಗ್ಯ.

ಕರ್ನಾಟಕ - ಸಂಸ್ಕೃತಿ ಸಂಪನ್ನ ದೇಶ

ಈ ಮುಂಚಿನ ಪುಟಗಳಲ್ಲಿ ಕರ್ನಾಟಕ ಸಂಸ್ಕೃತಿಯ ಮುಖ್ಯ ಲಕ್ಷಣಗಳನ್ನು ತಿಳಿಸಿಕೊಟ್ಟಿದ್ದೇನೆ. ಭಾರತೀಯ ಅಥವಾ ವಿಶ್ವದ ಸಂಸ್ಕೃತಿಗೆ ಕರ್ನಾಟಕವು ಕೊಟ್ಟಿರುವ ಮೌಲಿಕ ಕೊಡುಗೆಗಳನ್ನು ಸೂಕ್ಷ್ಮವಾಗಿ ಪರಿಚಯಿಸಿಕೊಟ್ಟಿದ್ದೇನೆ. ಕನ್ನಡಜನ ತಮ್ಮ ಪರಂಪರೆಯ ನಿಜವಾದ ಅರಿವನ್ನು ಪಡೆದಾಗ ಅವರ ಕೀಳರಿಮೆ ತೊಲಗಿ ಅವರು ಸ್ವಾಭಿಮಾನಿಗಳಾಗುತ್ತಾರೆ. ಈಗೀಗ ಕನ್ನಡ ಜನ ಹೆಚ್ಚು ಹೆಚ್ಚಾಗಿ ಕರ್ನಾಟಕದ ಬಗ್ಗೆ ತಿಳಿಯಲು ಕಾತರರಾಗುತ್ತಿದ್ದಾರೆ. ಕಾರ್ಖಾನೆ, ಕಛೇರಿ, ಸಿನಿಮಾ ಮಂದಿರ, ಶಾಲಾ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅಕ್ಷರಸ್ಥ ಕನ್ನಡಿಗರಿಗೆ ಕರ್ನಾಟಕದ ಪರಂಪರೆಯನ್ನು ತಿಳಿಯುವ ಹಸಿವು ಹೆಚ್ಚುತ್ತಿದೆ. ಆ ಹೆಮ್ಮೆ ಅವರನ್ನು ಮುಂದಿನ ಭವಿಷ್ಯದತ್ತ ಉತ್ಸಾಹದಿಂದ ಹೆಜ್ಜೆಹಾಕಲು ಸ್ಫೂರ್ತಿಕೇಂದ್ರವೂ ಆಗುತ್ತದೆ. ಇತಿಹಾಸದ ಅರಿವು ಅತ್ಯಂತ ಅಗತ್ಯ. ಇತಿಹಾಸದ ಅರಿವು ಮನುಷ್ಯನಿಗೆ ಮಾತ್ರ ಇದೆ - ಆ ಕಾರಣದಿಂದಲೇ ಅವನಿಗೊಂದು ಸಂಸ್ಕೃತಿ ನಾಗರಿಕತೆ ಉಂಟು. ಪ್ರಾಣಿಗಳಿಗೆ ಇತಿಹಾಸದ ಅರಿವಿಲ್ಲ- ಆ ಕಾರಣದಿಂದಲೇ ಅವುಗಳಲ್ಲಿ ಪ್ರಗತಿ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಲಿತನವನ್ನು ಮರೆತ ಹುಲಿಮರಿ

ಸ್ವಾಮಿ ವಿವೇಕಾನಂದರ ಒಂದು ಕತೆ ಜ್ಞಾಪಕಕ್ಕೆ ಬರುತ್ತದೆ. ಚಿಕ್ಕ ಹುಲಿಮರಿಯೊಂದು ಕುರುಬನ ಕೈಗೆ ಸಿಕ್ಕಿ ಅದು ಕುರಿಗಳ ಜೊತೆ ಬೆಳೆಯಿತು. ಅದೂ ಹುಲ್ಲು ತಿಂದು ಮೇ ಮೇ ಎಂದು ಅರಚಿತು. ಒಂದು ದಿನ ಬೇರೊಂದು ದೊಡ್ಡ ಹುಲಿ ಅಟ್ಟಿಸಿಕೊಂಡು ಬಂದಾಗ ಉಳಿದ ಕುರಿಗಳಂತೆಯೇ ಅದೂ ಹೆದರಿ ಓಡಿತು. ಆ ಹುಲಿ ಅಚ್ಚರಿಗೊಂಡು ಹುಲಿಮರಿಯನ್ನು ಅರಿಸಿ ಹಿಡಿದು, ಎಳೆದುಕೊಂಡು ಹೋಗಿ ಒಂದು ಕೊಳದ ಮೇಲೆ ಮುಖವನ್ನು ಚಾಚಿದಾಗ ತಾನೂ ಆ ಹುಲಿಯಂತೆಯೇ ಇರುವುದನ್ನು ಕಂಡು ಹುಲಿಮರಿಗೆ ಆಶ್ಚರ್ಯವೋ ಆಶ್ಚರ್ಯ! ''ನೀನು ಕುರಿಯಲ್ಲ, ಹುಲಿ'' ಎಂದು ಹೇಳಿ, ಗರ್ಜಿಸುವುದನ್ನು ಹುಲಿ ಆ ಮರಿಗೆ ಕಲಿಸಿತು. ಆ ಹುಲಿಮರಿ ಹಿಂದಕ್ಕೆ ಕುರಿಗಳ ಮಂದೆಗೆ ಹೋಗಿ ಗರ್ಜಿಸಿದಾಗ ಕುರಿಗಳೆಲ್ಲ ದಿಕ್ಕಾಪಾಲಾದವು. ಸ್ವಸ್ವರೂಪ ಜ್ಞಾನವನ್ನು ಪಡೆದ ಆ ಹುಲಿಮರಿ ಕುರಿತನದಿಂದ ಹುಲಿತನವನ್ನು ಪಡೆದು ಕಾಡಿಗೆ ಹಿಂದಿರುಗಿ ವನರಾಜನಾಗಿ ಮೆರೆಯಿತು, ಗರ್ಜಿಸುತ್ತ ಎದೆ ಉಬ್ಬಿಸಿ ನಡೆದಾಡಿತು. ಕನ್ನಡ ಜನ ಹುಲಿಮರಿಗಳಿದ್ದಂತೆ: ಅವರ ಸ್ವರೂಪಜ್ಞಾನ ಅವರಿಗೆ ತಾತ್ಕಾಲಿಕವಾಗಿ ಮರೆಯಾಗಿದೆ, ಅಥವಾ ಮರೆಯಾಗಿತ್ತು. ಇಡೀ ಭಾರತದಲ್ಲಿ ಯಾವುದೇ ದೃಷ್ಟಿಯಿಂದಲೂ ಅವರು ತಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿ, ಬುದ್ಧಿಶಕ್ತಿ, ಕಲೆಗಳಲ್ಲಿ ಹೆಮ್ಮೆಪಟ್ಟುಕೊಳ್ಳುವ ಸ್ಥಿತಿಯಲ್ಲಿದ್ದಾರೆ. ಇತಿಹಾಸದ ಅರಿವು ಅವರಿಗೆ ಈಗೀಗ ಜ್ಞಾನೋದಯವನ್ನುಂಟುಮಾಡಿದೆ.

ಸ್ವಾಭಿಮಾನ, ಸಮನ್ವಯಗಳ ತಪ್ಪುಗ್ರಹಿಕೆ

ಸ್ವಾಭಿಮಾನವನ್ನು ಅಹಂಕಾರವೆಂದೂ ಸಮನ್ವಯವನ್ನು ಎಲ್ಲರ ಜೊತೆ ಅವರಂತೆಯೇ ಹೊಂದಿಕೊಂಡು ಹೋಗುವ ಮೆದುಗುಣವೆಂದೂ ತಪ್ಪಾಗಿ ಭಾವಿಸಿದ ಹಲವರಿದ್ದಾರೆ. ಆಯಾಯಾ ಭಾಷೆಯವರ ಜೊತೆ ಅವರವರ ಭಾಷೆಯಲ್ಲೇ ಮಾತನಾಡುವ, ಎಲ್ಲರನ್ನೂ ಬರಮಾಡಿಕೊಂಡು ಅವರಿಗೆ ಆಶ್ರಯ ನೀಡಿ ಅವರು ಪ್ರಬಲರಾಗುವಂತೆ ತಾವೇ ಪ್ರೋತ್ಸಾಹಿಸಿ ಬಳಿಕ ಅವರ ಯಾಜಮಾನ್ಯವನ್ನೇ ಒಪ್ಪಿಕೊಳ್ಳುವ ಗುಣವು ದೌರ್ಬಲ್ಯವೇ ಹೊರತು ಸದ್ಗುಣವೂ ಅಲ್ಲ, ಸಮನ್ವಯವೂ ಅಲ್ಲ. ಕರ್ನಾಟಕಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ. ಆ ವೈಶಿಷ್ಟ್ಯದ ನಾಶವು ಸಂಸ್ಕೃತಿಯ ನಾಶವೇ ಸರಿ.

Sri Vani Vilas Centre, Shringeri

CC-O. In Public Domain. Digitized by eGangotri

ಒಳ್ಳೆಯತನಕ್ಕೂ ದೌರ್ಬಲ್ಯಕ್ಕೂ ವ್ಯತ್ಯಾಸವನ್ನು ಅರಿಯಬೇಕು. ಸ್ವಾಭಿಮಾನಿಯ ಒಳ್ಳೆಯತನ ಬೇರೆ, ದುರ್ಬಲನ ಒಳ್ಳೆಯತನ ಬೇರೆ. ಕರ್ನಾಟಕವು ಇತರ ಸಂಸ್ಕೃತಿಗಳ ಒಳ್ಳೆಯ ಅಂಶಗಳನ್ನು ಬಳಸಿಕೊಂಡು ಅರಗಿಸಿಕೊಂಡು, ತಾನು ತಾನಾಗಿ ಉಳಿದು ಬೆಳೆಯಬೇಕು. ಅದು ಬಿಟ್ಟು ತನ್ನ ಭಾಷೆ, ಕಲೆ, ಜೀವನ ರೀತಿ, ಉದ್ಯೋಗಗಳನ್ನು ಅನ್ಯರ ಭಾಷೆ ಕಲೆಗಳು, ಅನ್ಯಜನ ಬಂದು ಆಕ್ರಮಿಸಿ ಅವನನ್ನು ಹಿನ್ನೆಲೆಗೆ ತಳ್ಳಿದರೆ ಅವನೊಬ್ಬ ನಿಷ್ಪ್ರಯೋಜಕನಾಗುತ್ತಾನೆ. ಅನ್ಯ ಪ್ರಾಂತೀಯರು ಬಂದು ಕನ್ನಡಿಗರ ಔದಾರ್ಯವನ್ನು ಹೊಗಳಿ ಉಬ್ಬಿಸಿದಾಗ ಉಬ್ಬಿ ಹೋದ ಕನ್ನಡಿಗ ತನಗೆ ತಾನೇ ಮಾಡಿಕೊಂಡಿರುವ ಅನ್ಯಾಯ ಅನೂಹ್ಯ. ಅದೆಲ್ಲವನ್ನೂ ವಿವರಿಸಲು ಇದು ಜಾಗ ಅಲ್ಲ.

ಕನ್ನಡ - ಕರ್ನಾಟಕ - ಭಾರತ

ಕನ್ನಡಿಗರಿಗೆ ಕರ್ನಾಟಕವನ್ನು ದುರ್ಬಲಗೊಳಿಸಿ ಕಟ್ಟುವ ಭಾರತ ಬೇಕಾಗಿಲ್ಲ. ಸಂಪದ್ಭರಿತ ಸಂಸ್ಕೃತಿಸಂಪನ್ನ ಕರ್ನಾಟಕವು ಮಾತ್ರ ಕನ್ನಡಿಗರ ವೈಶಿಷ್ಟ್ಯವನ್ನು ಕಾಪಾಡಬಲ್ಲದು. ಕನ್ನಡ ಇತಿಹಾಸದಿಂದ, ಕಲಿಯಬೇಕಾದ ದೊಡ್ಡ ಪಾಠವಿದೆ. ಕ್ರಿ.ಶ. 1565ರಲ್ಲಿ ವಿಜಯನಗರದ ಸಾಮ್ರಾಜ್ಯವು ಮಣ್ಣು ಪಾಲಾದ ರಕ್ಕಸತಂಗಡಿ ಯುದ್ಧದ ಬಳಿಕ ಕನ್ನಡಿಗನಿಗೆ ಜೀವಸತ್ವವನ್ನು ಒದಗಿಸುತ್ತಿದ್ದ ದೊಡ್ಡರಾಜಮನೆತನಗಳು ಮರೆಯಾದವು. ಅಲ್ಲಿಂದ ಇಪ್ಪತ್ತನೆಯ ಶತಮಾನದವರೆಗಿನ ಚರಿತ್ರೆಯ ಘಟನೆಗಳು ಕನ್ನಡಿಗರನ್ನು ಅಧೀರರನ್ನಾಗಿ ಮಾಡಿದವು. ಕರ್ನಾಟಕವು ಅನ್ಯಭಾಷೀಯರ ಆಡುಂಬೊಲವಾಯಿತು. ಅನಂತಪುರ, ನೀಲಗಿರಿ, ಗೋವಾ, ಔರಂಗಾಬಾದ್, ಸೊಲ್ಲಾಪುರ, ಕೊಲ್ಲಾಪುರ ನಾಂದೇಡ್ ಇವೇ ಮೊದಲಾದ ಪ್ರದೇಶಗಳಲ್ಲಿ ಅನ್ಯಭಾಷೀಯರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಯೂರಿ ಅವು ಕನ್ನಡಿಗರ ಕೈ ತಪ್ಪಿದವು. ಕನ್ನಡಿಗ ತನ್ನತನದ ಬಗ್ಗೆ ಇದ್ದ ಜಾಗೃತಿಯನ್ನು ಕಳೆದುಕೊಂಡ ಫಲ ಇದು. ಅತಿ ವಲಸೆಯಿಂದಾಗಿ ಕರ್ನಾಟಕದಲ್ಲೇ ಇರುವ ಬೆಳಗಾವಿಯ ಪರಿಸ್ಥಿತಿ ಏನಾಗಿದೆ ನೋಡಿ.

ಏಳಿ, ಎದ್ದೇಳಿ!

Vidyabharathi Book Centre, Sringeri

ಕನ್ನಡ ಜನರೆ, ಏಳಿ! ಎದ್ದೇಳಿ! ಎದ್ದೇಳಿ! ಬೌದ್ಧಿಕರೆಂದು

CC-O. In Public Domain. Digitized by eGangotri

ಕರೆದುಕೊಳ್ಳುವ ಜನರೂ ರಾಜಕಾರಣಿಗಳೂ ವಿಶ್ವಭ್ರಾತೃತ್ವ, ಭಾರತದ ಅಖಂಡತೆ, ಭಾಷಾಂಧತೆ ಇತ್ಯಾದಿ ಮಾತುಗಳಿಂದ ನಮ್ಮನ್ನು ವಂಚಿಸಲು ಯತ್ನಿಸುತ್ತಿರುವ ಬಗ್ಗೆ ಜಾಗೃತರಾಗಿರಿ. ಕನ್ನಡಿಗ ಎಂದೂ ಭಾಷಾಂಧನಲ್ಲ. ಅವನು ಎಂದೂ ದೇಶದ್ರೋಹಿಯಲ್ಲ. ನಿಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಇರಲಿ. ತನ್ನತನವನ್ನು ಉಳಿಸಿಕೊಳ್ಳದ ಪ್ರಾಂತ್ಯಕ್ಕೆ ಉಳಿಗಾಲವಿಲ್ಲ. ಅನ್ಯಭಾಷೀಯ ಸೋದರರ ಬಗ್ಗೆ ಗೌರವವಿಡೋಣ. ಆದರೆ ಅನ್ಯಭಾಷೀಯ ಸೋದರರು ಕರ್ನಾಟಕಕ್ಕೆ ಬಂದು ಕರ್ನಾಟಕವು ತಮ್ಮ ವಸಾಹತುಗಳಾಗುವಂತೆ ಮಾಡುತ್ತಿದ್ದಾರೆ. ಇದನ್ನು ತಡೆಯದಿದ್ದರೆ ಕರ್ನಾಟಕವು ಸರ್ವನಾಶವಾಗುತ್ತದೆ. ಧೀರರಾದ ಅಸ್ಸಾಮ್ ಯುವಕರು ಹೋರಾಡಿ ತಮ್ಮ ಪ್ರಾಂತವನ್ನು ವಿನಾಶದಿಂದ ತಪ್ಪಿಸಿದರು. ಅಂತಹ ಹೋರಾಟಕ್ಕೆ ಕನ್ನಡಿಗ ಜನ ಸಿದ್ಧವಾಗಬೇಕಾಗಿದೆ. ಗಡಿಗಳಲ್ಲಿ ಮರಾಠಿಗರು, ತಮಿಳರು, ಮಲಯಾಳಿಗಳು ಕನ್ನಡವನ್ನು ಲೆಕ್ಕಿಸುತ್ತಿಲ್ಲ. ಭವಿಷ್ಯದ ಬೆಂಗಳೂರು ಗಾಬರಿಯನ್ನು ಹುಟ್ಟಿಸುತ್ತದೆ. ಹಿಂದಿ ಅಧಿಕೃತಭಾಷೆಯ ಹೆಸರಲ್ಲಿ ವಿಜೃಂಭಿಸುತ್ತಿದೆ. ಕರ್ನಾಟಕದಲ್ಲಿ ಕನ್ನಡ ಮಕ್ಕಳು ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ. ಕೇಂದ್ರದಲ್ಲಿ ಕನ್ನಡಿಗರ ಧ್ವನಿ-ದುರ್ಬಲದ ಮಾತಿರಲಿ- ಅದು ಇಲ್ಲವೇ ಇಲ್ಲ. ಇಂತಹ ಸಂದರ್ಭದಲ್ಲಿ ಕನ್ನಡ ಜನ ಒಗ್ಗಟ್ಟಿನಿಂದ ನಿಂತು ತಮ್ಮಲ್ಲ ಶಕ್ತಿಯನ್ನು ಬಳಸಿ ತಮ್ಮ ಆತ್ಮರಕ್ಷಣೆ ಮಾಡಿಕೊಳ್ಳಬೇಕಾಗಿದೆ. 1956ರಲ್ಲಿ ಭಾಷಾವಾರು ಪ್ರಾಂತಗಳ ವಿಂಗಡಣೆಯಾಗಿ, ಹತ್ತೊಂಬತ್ತು ಜಿಲ್ಲೆಗಳ ಕರ್ನಾಟಕ ಆಯಿತು. ಅದು ಇನ್ನೂ ಕುಗ್ಗದಂತೆ ಮಾಡೋಣ. ಕರ್ನಾಟಕದಲ್ಲಿ ಕನ್ನಡವು ರಾಜರಾಜೇಶ್ವರಿಯಾಗಿ ಮೆರೆದು ಭಾರತೀಯ ಸಂಸ್ಕೃತಿಯ ವಜ್ರ ಮಕುಟದಂತೆ ಬೆಳಗಲಿ ಎಂದು ಹಾರೈಸೋಣ. ಅದಕ್ಕಾಗಿ ಶ್ರಮಿಸೋಣ. ಭವಿಷ್ಯದತ್ತ ಕಣ್ಣು ನೆಟ್ಟು ನಮ್ಮ ಹಿಂದಿನ ಸಂಸ್ಕೃತಿಯಿಂದ ಸ್ಫೂರ್ತಿಯನ್ನು ಪಡೆದು ಮುನ್ನಡೆಯೋಣ.

ಇಂದು ಅಗತ್ಯವಾಗಿರುವುದು ಒಗ್ಗಟ್ಟು. ಒಕ್ಕಲಿಗ, ಲಿಂಗಾಯತ, ಬೇಡ, ಕುರುಬ, ಬ್ರಾಹ್ಮಣ, ಪರಿಶಿಷ್ಟ ಜಾತಿ-ಪಂಗಡ, ಕ್ರಿಶ್ಚಿಯನ್, ಎಂಬ ಭೇದವಿಲ್ಲದೆ, ಜನತಾ-ಕಾಂಗ್ರೆಸ್-ಬಿಜೆಪಿ ಎಂಬ ಭೇದವಿಲ್ಲದೆ ಎಲ್ಲ

Sri Vani Vilas Sanathana Book Centre, Sringeri

CC-O. In Public Domain. Digitized by eGangotri

ಕನ್ನಡದ ಜನ ಕನ್ನಡದ ಉಳಿವು ಬೆಳವಣಿಗೆಗಾಗಿ ಒಂದಾಗುವುದು ತೀರ ಅಗತ್ಯ. ಪಂಪನಲ್ಲಿ ಒಂದು ಪ್ರಸಂಗ: ದುರ್ಯೋಧನನು ಭೀಷ್ಮನಿಗೆ ಸೇನಾಪತಿ ಪಟ್ಟವನ್ನು ಕಟ್ಟಿ ಶತ್ರುಗಳನ್ನು ತನ್ನ ಮಂಚದ ಕಾಲಿಗೆ ಕಟ್ಟಿದ್ದೇನೆಂದು ಬೀಗುತ್ತಾನೆ. ಭೀಷ್ಮರು ವ್ಯದ್ಧರೂ ಪಾಂಡವಪಕ್ಷಪಾತಿಗಳೂ ಆದುದರಿಂದ ಯುದ್ಧದಲ್ಲಿ ಕಾದಾಡಲಾರರು ಆ ಕಾರಣ, ತನಗೆ ಪಟ್ಟಕಟ್ಟಬೇಕೆಂಬ ಕರ್ಣನ ಮಾತಿನಿಂದ ಸಿಡಿದೆದ್ದ ದ್ರೋಣರು ಆತ ಹೀನ ಕುಲದವನೆಂದು ಹೀಯಾಳಿಸಿ, ''ನಾಲಿಗೆ ಕುಲವನ್ನು ಹೇಳಿತು'' ಎಂದು ಅಪಮಾನಿಸುತ್ತಾರೆ. ಆಗ ಕರ್ಣನ ಬಾಯಿಂದ ಈ ಮಾತು ಬರುತ್ತದೆ: ''ಕುಲಂ ಕುಲಮಲ್ತು, ಚಲಂ ಕುಲಂ, ಗುಣಂ ಕುಲಂ, ಅಭಿಮಾನಂ ಅದೊಂದೇ ಕುಲಂ...'' ಹುಟ್ಟಿದ ಕುಲವು ನಿಜವಾದ ಕುಲವಲ್ಲ. ಚಲವೇ ಕುಲ, ಗುಣವೇ ಕುಲ, ಅಭಿಮಾನ ಒಂದೇ ಕುಲ. ಪಂಪನ ಈ ಕುಲದ ವ್ಯಾಖ್ಯೆ ನಮಗೆ ಪ್ರಸ್ತುತವಾದುದು. ಹುಟ್ಟಿನಿಂದ ನಾವು ಬೇರೆ ಬೇರೆ ಜಾತಿಯವರಾದರೂ ನಾವು ಚಲ, ಗುಣ, ಅಭಿಮಾನಿಗಳ ಕುಲವೆಂದು ಸಾರಿದ ಪಂಪನ ನಾಡಿನವರು. ನಮ್ಮದು ಅಭಿಮಾನದ ಕುಲ; ಸ್ವಾಭಿಮಾನವನ್ನು ಎತ್ತಿ ಹಿಡಿದ ಕನ್ನಡ ಕುಲ. ಯಾವನು ಸ್ವಾಭಿಮಾನಿಯಲ್ಲವೋ ಅವನು ಕನ್ನಡಿಗ ಅಲ್ಲ. ಇದು ನಮ್ಮ ದಾರಿ ದೀಪವಾಗಿರಲಿ. ತನ್ನ ಒಳಗೇ ಆಳವಾದ ಕೊರಗಿನಿಂದ ನೊಂದು ಬಸವಳಿದಿದ್ದಾಳೆ ಕನ್ನಡ ದೇವಿ. ಅವಳ ನೋವು ಒಳಗಣ್ಣಿಗೆ ಕಾಣುತ್ತಿದೆ; ಒಳಗಿವಿಗೆ ಕೇಳುತ್ತಿದೆ. ಆ ತಾಯಿ ತನ್ನ ಬಿಡುಗಡೆಗಾಗಿ ತನ್ನ ಮಕ್ಕಳಿಗೆ ಕರೆಯನ್ನು ಕೊಡುವ ಕಾಲವೂ ಬಂದೀತು. ಆ ಕಾಲ ಬಹುಬೇಗ ಬರಲಿ ಎಂದು ಕನ್ನಡ ಸೋದರರೇ ದಯಮಾಡಿ ಪ್ರಾರ್ಥಿಸಿ.*

* 'ಮಾರ್ದನ' ವಾರಪತ್ರಿಕೆಯಲ್ಲಿ ಪ್ರಕಟವಾದ ಧಾರಾವಾಹಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡ ಪ್ರೇಮ

ಕೆಲವರಿಂದ ಕರ್ನಾಟಕವನ್ನು ಪ್ರೀತಿಸುವುದು ಸಂಕುಚಿತ ದೃಷ್ಟಿಯೆನ್ನಿಸಿದೆ. ಅವರಿಗೆ ಭಾರತ ಮಾತ್ರ ಮುಖ್ಯ; ರಾಷ್ಟ್ರಪ್ರೇಮವೊಂದೇ ದೇಶಪ್ರೇಮ. ಕರ್ನಾಟಕ ಪ್ರೇಮ ಎಂಬ ಮಾತು ಅವರಿಗೆ ಅರ್ಥಹೀನ. ಕನ್ನಡ ನಾಡು, ಕನ್ನಡ ನುಡಿಗಳನ್ನು ಕೊಂಡಾಡುವುದು ಅವರಿಗೆ ರಾಷ್ಟ್ರದ್ರೋಹವಾಗಿಯೂ ಕಂಡಿದೆ. ಭಾರತೀಯ ಸಂಸ್ಕೃತಿಯೊಂದು ಇರುವಂತೆ ಕರ್ನಾಟಕ ಸಂಸ್ಕೃತಿಯೆಂಬುದೊಂದು ಅವರ ಪಾಲಿಗೆ ಇಲ್ಲ. ಇದು ಸರಿಯೇ? ವಿಚಾರ ಮಾಡೋಣ.

ಭಾರತ ಒಂದು ರಾಷ್ಟ್ರ. ಅದನ್ನು ಸಂವಿಧಾನವು ಒಂದು 'ಒಕ್ಕೂಟ' (Union) ಎಂದು ಕರೆದಿದೆ. ಎಂದರೆ ಅದು ಹಲವು ಪ್ರಾಂತ್ಯಗಳ ಒಂದು ಒಕ್ಕೂಟ: ಅಮೆರಿಕದ ಸಂಯುಕ್ತ ಸಂಸ್ಥಾನವಿದ್ದಂತೆ. ಭಾರತದ ವಿಸ್ತಾರವನ್ನು ಗಮನಿಸಿ. ಆದರಲ್ಲಿ ಸೇರ್ಪಡೆಯಾಗಿರುವ ಪ್ರಾಂತ್ಯಗಳಲ್ಲಿ ಹಲವು ಪ್ರಾಂತ್ಯಗಳು ಯೂರೋಪಿನ ಹಲವು ಸ್ವತಂತ್ರ ರಾಷ್ಟ್ರಗಳಿಗಿಂತ ದೊಡ್ಡದಾಗಿವೆ. ಮಧ್ಯಪ್ರದೇಶ, ಆಂಧ್ರ, ಅಷ್ಟೇಕೆ ಕರ್ನಾಟಕ ಯೂರೋಪಿನ ಸ್ಪೈನ್, ಪೋರ್ಚುಗಲ್‌ಗಳಿಗಿಂತ ಎಷ್ಟೋ ಪಾಲು ದೊಡ್ಡವು-ವಿಸ್ತೀರ್ಣದಲ್ಲಿ, ಜನಸಂಖ್ಯೆಯಲ್ಲಿ. ಭಾರತದ ಹಲವು ಪ್ರಾಂತ್ಯಗಳು ಹೀಗೆ ತಮ್ಮಷ್ಟಕ್ಕೆ ತಾವು ಸ್ವತಂತ್ರ ರಾಷ್ಟ್ರಗಳಾಗುವಷ್ಟು ದೊಡ್ಡದಾಗಿವೆ. ಇದನ್ನು ನಾವು ನೆನಪಿಡಬೇಕು.

ಇನ್ನು ಸಂಸ್ಕೃತಿಯನ್ನು ನೋಡೋಣ. ಯೂರೋಪಿಗೆ ಪ್ರತ್ಯೇಕವಾದ ಸಂಸ್ಕೃತಿ ಇದೆಯೆಂದರೆ ಉಂಟು; ಇಲ್ಲ ಎಂದರೆ ಇಲ್ಲ. ಅಲ್ಲಿನ ಎಲ್ಲ ರಾಷ್ಟ್ರಗಳಲ್ಲೂ ಕ್ರಿಶ್ಚಿಯನ್ ಮತ. ಎಲ್ಲ ರಾಷ್ಟ್ರಗಳ ಆಹಾರ ವಿಧಾನ, ಉಡುಪು ಬಹುತೇಕ ಒಂದೇ. ಎಲ್ಲರೂ ಆರ್ಯನ್ ಬುಡಕಟ್ಟಿನವರು. ಅಲ್ಲಿನ ಒಟ್ಟು ಸಂಸ್ಕೃತಿಗೆ ಗ್ರೀಕ್, ರೋಮನ್ ಸಂಸ್ಕೃತಿಗಳು ತವರು. ಹೀಗಿದ್ದೂ, ಅಲ್ಲಿನ ಒಂದು ರಾಷ್ಟ್ರದ ಸಂಸ್ಕೃತಿ ಇನ್ನೊಂದು ರಾಷ್ಟ್ರದ ಛಾಯೆ ಅಲ್ಲ. ಏಕೆಂದರೆ ಸಾಕಷ್ಟು ಭಾಷಾವೈವಿಧ್ಯವಿದೆ. ಇಂಗ್ಲಿಷ್ ಮಾತನಾಡುವವನಿಗೆ ಫ್ರೆಂಚ್, ಫ್ರೆಂಚ್ ಮಾತಾಡುವವನಿಗೆ ಜರ್ಮನ್, ಜರ್ಮನ್ ಮಾತುಗನಿಗೆ ರಷಿಯನ್

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಥವಾಗುವುದಿಲ್ಲ. ಸ್ವಿಟ್ಸರ್ಲೆಂಡಿನಲ್ಲೂ ಫ್ರೆಂಚ್, ಜರ್ಮನ್, ಇಟಾಲಿಯನ್ ಈ ಮೂರು ಭಾಷೆಗಳೂ ಅಧಿಕೃತ ಭಾಷೆಗಳು.

ಈಗ ಭಾರತಕ್ಕೆ ಬರೋಣ. ಭಾರತೀಯ ಸಂಸ್ಕೃತಿಯೆಂಬುದೊಂದು ಉಂಟು ಎಂದರೆ ಉಂಟು; ಇಲ್ಲ ಎಂದರೆ ಇಲ್ಲ. ಉಂಟು ಎಂದು ವಾದಿಸುವವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಕರ್ಮ ಸಿದ್ಧಾಂತ ಹಬ್ಬಿರುವುದನ್ನು ಎತ್ತಿ ತೋರಿಸಬಹುದು. ಆದರೆ ಇಲ್ಲಿ ಏಕತೆಗಿಂತ ವೈವಿಧ್ಯವೇ ಹೆಚ್ಚು. ಕಾಶ್ಮೀರದ ಜನರ ಉಡುಪು ಬಂಗಾಲಿಗಳ ಉಡುಪು ಕನ್ನಡಿಗರ ಉಡುಪು ಬೇರೆ ಬೇರೆ. ಆಹಾರ ವಿಧಾನಗಳಲ್ಲೂ ಸಾಕಷ್ಟು ಭೇದವಿದೆ. ಬುಡಕಟ್ಟಿನ ದೃಷ್ಟಿಯಿಂದ ನೋಡಿದರೆ ಹಲವು ಭಿನ್ನ ಜನಾಂಗಗಳು ಭಾರತದಲ್ಲಿ ಕಾಣಿಸುತ್ತವೆ. ಇಲ್ಲಿ ಹಿಂದೂ, ಮುಸಲ್ಮಾನ, ಕ್ರೈಸ್ತ, ಪಾರ್ಸಿ, ಸಿಖ್ ಇವೇ ಮೊದಲಾದ ಮತಧರ್ಮಗಳ ಅನುಯಾಯಿಗಳು ಇದ್ದಾರೆ. ಭಾಷೆಗಳ ದೃಷ್ಟಿಯಿಂದ ನೋಡಿದರೆ ಭಾರತದಲ್ಲಿ ನಾಲ್ಕು ಭಿನ್ನ ವಂಶಗಳಿಗೆ ಸೇರಿದ ಹಲವಾರು ಭಾಷೆಗಳಿವೆ. ದ್ರಾವಿಡ ಮೂಲದ ಭಾಷೆಗಳೇ ಇಪ್ಪತ್ತೆರಡು ಇವೆ. ಕನ್ನಡ, ತಮಿಳು, ತೆಲಗು ಮಲೆಯಾಳಂ ಎಂಬ ಮುಂದುವರಿದ ದ್ರಾವಿಡ ಭಾಷೆಗಳಲ್ಲದೆ, ದ್ರಾವಿಡ ವಂಶಕ್ಕೆ ಸೇರಿದ ಗಿರಿಜನ ಭಾಷೆಗಳುಂಟು. ಹೀಗೆಯೇ ಹಲವು ಆರ್ಯನ್ ಭಾಷೆಗಳೂ, ಮುಂಡಾ ಮತ್ತು ಆಸ್ಟ್ರೋ ಏಷಿಯಾಟಿಕ್ ಭಾಷೆಗಳೂ ಭಾರತದಲ್ಲಿವೆ. ಇವುಗಳಲ್ಲಿ ಅನೇಕ ಭಾಷೆಗಳು ಪ್ರಬುದ್ಧವಾಗಿದ್ದು, ಸಾವಿರಾರು ವರ್ಷಗಳ ಸುದೀರ್ಘವೂ ಸಂಪದ್ಭರಿತವೂ ಆದ ಚರಿತ್ರೆಯನ್ನು ಹೊಂದಿವೆ. ಯೂರೋಪಿನ ಹಲವು ಭಾಷೆಗಳಿಗಿಂತ ಅಥವಾ ಅವುಗಳಷ್ಟೇ ಬೆಳೆದಿವೆ. ಅಷ್ಟೇ ಸಮೃದ್ಧವಾದ ಸಾಹಿತ್ಯವನ್ನು ಹೊಂದಿವೆ. ಕರ್ನಾಟಕ, ಆಂಧ್ರ ಮಹಾರಾಷ್ಟ್ರಗಳ ಜಾನಪದ ಸಂಪತ್ತು, ಶಿಲ್ಪ ಸಂಪತ್ತು ವಿಶಿಷ್ಟವೂ ವೈವಿಧ್ಯಮಯವೂ ಆಗಿವೆ.

ವಾಸ್ತವವಾಗಿ ಭಾರತೀಯ ಸಂಸ್ಕೃತಿಯೆಂಬುದು ಪ್ರತ್ಯೇಕವಾಗಿ ಇಲ್ಲ. ಕರ್ನಾಟಕ ಸಂಸ್ಕೃತಿ, ತಮಿಳು ಸಂಸ್ಕೃತಿ, ತೆಲುಗು ಸಂಸ್ಕೃತಿ, ಮಹಾರಾಷ್ಟ್ರ ಸಂಸ್ಕೃತಿ, ಇವೇ ಮೊದಲಾದ ಸದೃಶವೂ ಭಿನ್ನವೂ ಆದ ಸಂಸ್ಕೃತಿಗಳ ಸಮೂಹರೂಪವೇ ಭಾರತೀಯ ಸಂಸ್ಕೃತಿ. ಈ ಬಿಡಿ ಸಂಸ್ಕೃತಿಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇರ್ಪಡಿಸಿ ಭಾರತೀಯ ಸಂಸ್ಕೃತಿ ಇಲ್ಲ. ಎಂದರೆ, ಭಾರತೀಯ ಸಂಸ್ಕೃತಿಯನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಇದರ ಅರ್ಥವೆಂದರೆ ಭಾರತದಲ್ಲಿ ಒಂದೊಂದು ಪ್ರಾಂತಕ್ಕೂ ವಿಶಿಷ್ಟ ಜೀವನ ವಿಧಾನವಿದೆ. ಆ ವಿಶಿಷ್ಟ ಸಂಸ್ಕೃತಿಯನ್ನು ಗುರುತಿಸುವುದು, ಪ್ರೀತಿಸುವುದು ಭಾರತೀಯ ಸಂಸ್ಕೃತಿಯನ್ನು ಪ್ರೀತಿಸಿದಂತೆಯೇ.

ಉತ್ತರ ಪ್ರದೇಶದಂತಹ ಪ್ರಾಂತದ ಸಂಸ್ಕೃತಿಯೇ ಭಾರತದ ಸಂಸ್ಕೃತಿಯೆಂದೂ, ಸಂಸ್ಕೃತವೋ ಹಿಂದಿಯೋ ಆ ಸಂಸ್ಕೃತಿಯ ಅಭಿವ್ಯಕ್ತಿಯೆಂದೂ, ಭಾವಿಸುವುದು ಸಂಕುಚಿತ ದೃಷ್ಟಿಯೆಂಬಲ್ಲಿ ಅನುಮಾನವಿಲ್ಲ. ಭಾರತದ ಅಖಂಡತೆಯನ್ನು ಉಳಿಸಲು ಭಾರತದ ಎಲ್ಲ ಭಾಷೆಗಳಿಗೆ, ಎಲ್ಲ ಪ್ರಾದೇಶಿಕ ಸಂಸ್ಕೃತಿಗಳಿಗೆ ಸಮಾನ, ಸ್ಥಾನ, ಮಾನ, ಗೌರವ, ಪ್ರೋತ್ಸಾಹಗಳು ದೊರಕುವುದು ಅಗತ್ಯವಾಗಿದೆ. ಕರ್ನಾಟಕ ಸಂಸ್ಕೃತಿಯನ್ನು ಪ್ರೀತಿಸುವುದು ರಾಷ್ಟ್ರಪ್ರೇಮದ ನಿಜವಾದ ಕುರುಹು ಎಂಬಲ್ಲಿ ಅನುಮಾನವಿಲ್ಲ.

ಕರ್ನಾಟಕ ಸಂಸ್ಕೃತಿಯು ಭಾರತದ ಸಂಸ್ಕೃತಿಗಳಲ್ಲಿ ಒಂದು ವೈಶಿಷ್ಟ್ಯವನ್ನು ಪಡೆದಿದೆ. ಈ ವೈಶಿಷ್ಟ್ಯವಿರುವುದರಿಂದಲೇ ಅದನ್ನು ಕರ್ನಾಟಕ ಸಂಸ್ಕೃತಿ ಎಂದು ನಾವು ಗುರುತಿಸುತ್ತೇವೆ. ಆ ವೈಶಿಷ್ಟ್ಯ ಯಾವುದು ಅದು ಎಷ್ಟು ಬಗೆಗಳಲ್ಲಿ ಕಾಣಿಸಿಕೊಂಡಿದೆ? ಕರ್ನಾಟಕ ಸಂಸ್ಕೃತಿಯು ಭಾರತೀಯ ಸಂಸ್ಕೃತಿಗೆ ಅಥವಾ ವಿಶ್ವ ಸಂಸ್ಕೃತಿಗೆ ಕೊಟ್ಟಿರುವ ಕೊಡುಗಗಳೇನು? ವಿಚಾರ ಮಾಡೋಣ.

ಒಂದು ಸಂಸ್ಕೃತಿಯೆಂದರೆ ಆ ಜನಾಂಗದ ಜೀವನ ವಿಧಾನ; ಅದರ ಚರಿತ್ರೆ. ಕರ್ನಾಟಕ ಸಂಸ್ಕೃತಿಗೆ ಎರಡೂವರೆ ಸಾವಿರ ವರ್ಷಗಳ ವೈಭವಯುತ ಚರಿತ್ರೆಯಿದೆ. ಇಲ್ಲಿ ಆಳಿದ ದೊರೆಗಳು ಭಾರತದಾದ್ಯಂತ ಮತ್ತು ಭಾರತದ ಹೊರಗೂ ಕರ್ನಾಟಕದ ಕೀರ್ತಿಯನ್ನು ಹಬ್ಬಿಸಿದರು. ಹರ್ಷನನ್ನು ಸೋಲಿಸಿದ ಇಮ್ಮಡಿ ಪುಲಿಕೇಶಿಯ ಆಸ್ಥಾನಕ್ಕೆ ಇರಾನಿನ ದೊರೆ ರಾಯಭಾರಿಯನ್ನು ಕಳಿಸಿಕೊಟ್ಟಿದ್ದ. ವಿಜಯನಗರದ ಕೃಷ್ಣದೇವರಾಯನ ಕೀರ್ತಿ ಹೊರದೇಶಗಳಿಗೂ ಹಬ್ಬಿತ್ತು. ಕನ್ನಡದ ದೊರೆಗಳ ಔದಾರ್ಯವೂ ಅಷ್ಟೇ

CC-O. Jagadguru Shri Shivarathri Deshikendra Mahaswamiji Vidyapeetha, Ramanagara. Shri Vidyabhaskara Shri Shivarathri Book Centre, Sringeri

CC-O. In Public Domain. Digitized by eGangotri

ದೊಡ್ಡದು. ಕಂಚಿಯ ಪಲ್ಲವ ದೊರೆಗಳು ಚಾಲುಕ್ಯರನ್ನು ಸೋಲಿಸಿ ಬಾದಾಮಿಯನ್ನು ಸುಟ್ಟರು. ಆದರೆ ಅದೇ ಚಾಲುಕ್ಯ ವಂಶದ ದೊರೆ ವಿಜಯಾದಿತ್ಯನು ಮುಂದೆ ಪಲ್ಲವರನ್ನು ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡರೂ ಅದನ್ನು ಸುಡದೆ ಅಲ್ಲಿನ ದೇವಾಲಯದ ಐಶ್ವರ್ಯವನ್ನು ಕಂಡು ಅದನ್ನು ಆ ದೇವಾಲಯಕ್ಕೇ ಬಿಟ್ಟುಕೊಡುತ್ತಾನೆ. ಈ ಔದಾರ್ಯ ಕನ್ನಡಿಗರಿಗೆ ಮಾತ್ರ ಸಾಧ್ಯ. ಕನ್ನಡಿಗರ ಶೌರ್ಯ ಪರಂಪರೆ ಭಾರತದಲ್ಲೆಲ್ಲ ಮನೆಮಾತಾಗಿತ್ತು. ಕರ್ನಾಟಕದಲ್ಲಿರುವಷ್ಟು ವೀರಗಲ್ಲುಗಳು ಭಾರತದಲ್ಲಿ ಮತ್ತೆಲ್ಲೂ ದೊರಕವು. ಚಾಲುಕ್ಯರ 'ಕರ್ನಾಟ ಬಲ' ಎಂಬ ಹೆಸರಿನ ಸೇನೆಯು ಇಡೀ ಭಾರತದಲ್ಲಿ ಅಜೇಯವೆಂದು ಪ್ರಖ್ಯಾತವಾಗಿತ್ತು. ಕರ್ನಾಟಕವು ಎಲ್ಲ ಮತಗಳಿಗೂ ಆಶ್ರಯವನ್ನು ಕೊಟ್ಟಿತ್ತು. ಶೈವ, ವೈಷ್ಣವ, ಬೌದ್ಧ, ಜೈನಗಳೆಂಬ ನಾಲ್ಕು ಮತಗಳು ಇಲ್ಲಿ ಆಶ್ರಯವನ್ನು ಪಡೆದು ಅಭಿವೃದ್ಧಿಯನ್ನು ಹೊಂದಿದವು. ಕರ್ನಾಟಕವು ಪರಮತ ಸಹಿಷ್ಣುತೆಗೆ ಇನ್ನೊಂದು ಹೆಸರು. ''ದೇವನೊಬ್ಬ ನಾಮ ಹಲವು'' ಎಂಬ, ''ಮನುಷ್ಯ ಜಾತಿ ತಾನೊಂದೆ ವಲಂ'' ಎಂಬ ಶಾಶ್ವತ ಸತ್ಯಗಳನ್ನು ಸಾರಿದ ನಾಡು ಇದು. ದಕ್ಷಿಣ ಭಾರತದ ಸಂಗೀತ ಪರಂಪರೆಗೆ 'ಕರ್ನಾಟಕ ಸಂಗೀತ'ವೆಂದೇ ಹೆಸರು. ಆ ಸಂಗೀತ ಪರಂಪರೆ ಹುಟ್ಟಿ ಬೆಳೆದುದು ಕರ್ನಾಟಕದಲ್ಲಿ ಎಂಬುದನ್ನು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಪುರಂದರದಾಸರಂತಹ ವಾಗ್ಗೇಯಕಾರರೂ ನಿಜಗುಣಶಿವಯೋಗಿಯಂತಹ ಶಾಸ್ತ್ರಕರ್ತರೂ ಇಲ್ಲಿ ಕಾಣಿಸಿಕೊಂಡರು. ಕರ್ನಾಟಕದ ದೇವಾಲಯಗಳ ಶಿಲ್ಪಗಳ ಸೌಂದರ್ಯ ಅವರ್ಣನೀಯ. ಎಲಿಫೆಂಟಾ, ಎಲ್ಲೋರ, ಅಜಂತ ಗುಹಾಂತರ್ದೇವಾಲಯಗಳನ್ನು ಕೊರೆಯಿಸಿದವರು ಕನ್ನಡಿಗರು. ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳು ಭಾರತೀಯ ವಾಸ್ತುಶಿಲ್ಪ ಕಾರ್ಯಾಗಾರಗಳೆಂದೇ ಪ್ರಖ್ಯಾತವಾಗಿವೆ. ಗೊಮ್ಮಟನ ಮೂರ್ತಿಯ ನಿರಾಡಂಬರ ಭವ್ಯತೆ ಎಶ್ವದಲ್ಲಿ ಮತ್ತೆಲ್ಲೂ ಕಾಣದು. ಬೇಲೂರು, ಹಳೇಬೀಡು, ಸೋಮನಾಥಪುರಗಳಲ್ಲಿನ ಹೊಯ್ಸಳ ದೇವಾಲಯಗಳ ಸೂಕ್ಷ್ಮ ಕುಸುರಿ ಕೆಲಸಕ್ಕೆ ಸರಿಸಾಟಿ ಮತ್ತೊಂದಿಲ್ಲ. ಕನ್ನಡ ಭಾಷೆ ಮಧುರವಾದುದು. ಅದು ಎಂತಹ ಸಂಕೀರ್ಣ ಆಲೋಚನೆಗಳನ್ನೂ ಉನ್ನತ ಭಾವನೆಗಳನ್ನೂ ಸುಲಭವಾಗಿ ಹಿಡಿಸಿಟ್ಟುಕೊಳ್ಳಬಲ್ಲದು. ಅಮೂಲ್ಯ ಸಾಹಿತ್ಯಗ್ರಂಥಗಳನ್ನು ಬಿಟ್ಟರೆ

CC-O. In Public Domain. Digitized by eGangotri

ಆದೇ ಭಾರತದ ಪ್ರಾಚೀನ ಭಾಷೆ. ಕನ್ನಡದಲ್ಲಿ ಶ್ರೇಷ್ಠ ಸಾಹಿತ್ಯ ಕಾಣಿಸಿಕೊಂಡ ಹತ್ತನೆಯ ಶತಮಾನದಲ್ಲಿ ಹಿಂದಿ ಭಾಷೆ ಇನ್ನೂ ಹುಟ್ಟಿಯೇ ಇರಲಿಲ್ಲ. ಪಂಪ, ರನ್ನ, ಜನ್ನ, ನಾಗವರ್ಮ, ನಾಗಚಂದ್ರ, ಬಸವ, ಅಲ್ಲಮ, ಮಹಾದೇವಿಯಕ್ಕ, ಕುಮಾರವ್ಯಾಸ ಪುರಂದರದಾಸರಂತಹ ಶ್ರೇಷ್ಠ ಕವಿಗಳಿಗೆ ಜನ್ಮ ಕೊಟ್ಟ ನಾಡಿದು. ಸ್ತ್ರೀಯ ಬೆಳವಣಿಗೆಗೆ ಪ್ರೋತ್ಸಾಹ ಇಲ್ಲಿ ಸಿಕ್ಕಿತು. ವಿಶ್ವದಲ್ಲೇ ವಿಶಿಷ್ಟವಾದುದೆನ್ನಬಹುದಾದ ಕ್ರಾಂತಿ ಎಂಟುನೂರು ವರ್ಷಗಳ ಹಿಂದೆ ನೆಡೆದುದು ಕರ್ನಾಟಕದಲ್ಲಿ. ಅದರ ಫಲವಾಗಿ ಮೂಡಿಬಂದ ವಚನ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಕನ್ನಡ ಶಾಸನಗಳ ಸಾಹಿತ್ಯ ಶೈಲಿ ಇಡೀ ಭಾರತದಲ್ಲಿ ಮತ್ತೊಂದೆಡೆ ಕಾಣಸಿಗದು. ಈ ಎಲ್ಲ ಬಿಡಿಲಕ್ಷಣಗಳನ್ನು ಒಟ್ಟಿಗೆ ಸೇರಿಸಿ ನೋಡಿದಾಗ ಕರ್ನಾಟಕ ಸಂಸ್ಕೃತಿಯೊಂದು ಮೂಡುತ್ತದೆ. ಆ ಸಂಸ್ಕೃತಿಯ ಭಾಗವಾಗಿ ಬಂದಿರುವ ಜನರಲ್ಲಿ ಸಹೃದಯತೆ, ಸುಸಂಸ್ಕೃತಿಗಳು ಎರಡನೆಯ ಸ್ವಭಾವವಾಗಿ ಸೇರಿಹೋಗಿವೆ. ಇತರ ಜನರ ಮತ್ತು ಭಾಷಾ ಸಾಹಿತಿಗಳ ಪ್ರಭಾವಕ್ಕೆ ಒಳಗಾಗಿಯೂ ಕರ್ನಾಟಕ ಸಂಸ್ಕೃತಿಯು ತನ್ನ ವ್ಯಕ್ತಿತ್ವವನ್ನು ಬಿಟ್ಟುಕೊಟ್ಟಿಲ್ಲ.

ನಾವು ಕನ್ನಡಿಗರು, ನಾವು ಒಂದು ಶ್ರೀಮಂತ ಸಂಸ್ಕೃತಿಯ ಪರಂಪರೆಯ ವಾರಸುದಾರರು ಎಂಬ ಸಂಗತಿ ನಮ್ಮ ಅಭಿಮಾನವನ್ನು ಗಗನದೆತ್ತರಕ್ಕೆ ಎತ್ತುವಂತಾಗಲಿ ಎಂದು ನಾನು ಹಾರೈಸುತ್ತೇನೆ.*

* ಆಕಾಶವಾಣಿ ಕೃಪೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿವೇದನೆ

"ಕನ್ನಡ ಸಂಸ್ಕೃತಿ: ನಮ್ಮ ಹೆಮ್ಮೆ" ಪುಸ್ತಕದ ಎರಡು ಆವೃತ್ತಿಗಳ ಒಟ್ಟು ಐದು ಸಾವಿರ ಪ್ರತಿಗಳು ಎರಡು ವರ್ಷಗಳ ಅವಧಿಯಲ್ಲಿ ಮಾರಾಟಗೊಂಡು, ಈಗ ಅದರ ಮೂರನೆಯ ಆವೃತ್ತಿಯು ಹೊರಬರುತ್ತಿದೆ. ಸುಲಭ ಬೆಲೆ ಹಾಗೂ ವ್ಯವಸ್ಥಿತ ಮಾರಾಟದ ಜಾಲದಿಂದಾಗಿ ಇದು ಸಾಧ್ಯವಾಗಿದೆ. ಕನ್ನಡ ಸಂಸ್ಕೃತಿಯನ್ನು ಸಂಕ್ಷಿಪ್ತವಾಗಿ, ಸರಳವಾಗಿ ಆದರೆ ಅಧಿಕೃತವಾಗಿ ಪರಿಚಯಿಸಿಕೊಡುವ ಈ ಕೃತಿಯು ವಿಶೇಷವಾಗಿ ಶಾಲಾ ವಿದ್ಯಾರ್ಥಿಗಳಿಗೆ, ನವಸಾಕ್ಷರರಿಗೆ ಹಾಗೂ ಶ್ರೀಸಾಮಾನ್ಯ ಕನ್ನಡಿಗರಿಗೆ ಅತ್ಯಂತ ಉಪಯುಕ್ತವಾದದ್ದೆಂದು ಕನ್ನಡ ಸಾರಸ್ವತ ಲೋಕದ ಹಿರಿಯರು ಅಭಿಪ್ರಾಯಿಸಿದ್ದಾರೆ. ಪತ್ರಿಕೆಗಳು ಸಹ ಮುಕ್ತಕಂಠದಿಂದ ಪ್ರಶಂಸಿಸಿವೆ.

ಈ ಪುಸ್ತಕದ ಮೂರನೆಯ ಆವೃತ್ತಿಯು ಪ್ರಕಟವಾಗಲು ಸಹಕರಿಸಿದ ಶ್ರೀ ಎಂ. ಮಹೇಶನ್, ಶ್ರೀ ಐ. ಎಂ. ವಿಠ್ಠಲಮೂರ್ತಿ, ಡಾ. ಎಸ್. ಕೃಷ್ಣಮೂರ್ತಿ, ಶ್ರೀ ಸುಭಾಷ್‌ಭರಣಿ, ಶ್ರೀ ಎಚ್. ಕೆ. ಲಕ್ಷ್ಮೀನಾರಾಯಣ ಅಡಿಗ, ಶ್ರೀ ಲಾಲ್‌ಚಂದ್ ಜೈನ್, ಶ್ರೀ ಕೆ. ಪಿ. ಷಡಕ್ಷರಿ, ಶ್ರೀ ಎ. ಎನ್. ಮಂಜುನಾಥ್ ಹಾಗೂ ಉದಯ ಧರ್ಮಸ್ಥಳ ಅವರಿಗೆಲ್ಲಾ ಬಳಗವು ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ಈ ಪುಸ್ತಕದ ಮಾರಾಟದಿಂದ ಬರುವ ಪೂರ್ತಿ ಹಣ ಸಾಹಿತಿಗಳ ಕಲಾವಿದರ ಬಳಗದ ಕನ್ನಡಪರ ಚಟುವಟಿಕೆಗಳಿಗಾಗಿ ವಿನಿಯೋಗವಾಗುತ್ತದೆ. ಆದ್ದರಿಂದ ಈ ಕೃತಿಯನ್ನು ಕನ್ನಡಿಗರು ಕೊಂಡು ಪ್ರೋತ್ಸಾಹಿಸಬೇಕೆಂದು ನಿವೇದನೆ.

ಡಾ. ಎಂ. ಚಿದಾನಂದಮೂರ್ತಿ
ಪ್ರಧಾನ ಸಂಚಾಲಕ
ಸಾಹಿತಿಗಳ ಕಲಾವಿದರ ಬಳಗ

20-7-1989
ಬೆಂಗಳೂರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri